ಸಂಪುಟ : 8 ಸಂಚಿಕೆ 302 ಪುಟ : 4 ಬೆಲೆ : 3.00 ಶುಕ್ರವಾರ ಜನವರಿ 12, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 302 Pages : 4 Price : 3.00 Friday JANUARY 12, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಜಿಲ್ಲೆಯಾದ್ಯಂತ ಎಳ್ಳು ಅಮಾವಾಸ್ಯೆ ಹಬ್ಬದ ಸಂಭ್ರಮ । ಚರಗ ಚೆಲ್ಲಿ ಭೂತಾಯಿಗೆ ನಮಿಸಿದ ರೈತರು

# ಭೂರಮೆಗೆ ಶರಣೆಂದ ಅನ್ನದಾತ

**■ವಿಜಯಸಾಕ್ಷಿ ಸುದ್ದಿ, ಗದಗ**

ಈ ವರ್ಷ ಉತ್ತರ ಕರ್ನಾಟಕದಲ್ಲಿ ಭೀಕರ ಬರಗಾಲ ಆವರಿಸಿ, ರೈತರ ಬದುಕನ್ನು ಆಪೋಶನ ತೆಗೆದುಕೊಂಡಿದೆ. ಬೆಳೆಗಳೆಲ್ಲವೂ ಅಲ್ಲಲ್ಲೇ ಕಮರಿ, ಅನ್ನದಾತರೇ ಸಂಕಷ್ಟ ಎದುರಿಸುವಂತಾಗಿದೆ. ಬರದ ನೋವು ಮತ್ತೆ ಮತ್ತೆ ಬರೆ ಎಳೆಯುತ್ತಲೇ ಇದೆ. ಆದರೆ, ರೈತರು ಎಷ್ಟೇ ಸಂಕಷ್ಟವಿದ್ದರೂ, ಮನದಲ್ಲಿ ನೂರಾರು ದುಗುಡಗಳಿದ್ದರೂ ಎಳ್ಳು ಅಮಾವಾಸ್ಯೆ ಬಂತೆಂದರೆ, ಎಲ್ಲವನ್ನೂ ಮರೆತು ಮತ್ತೆ ನಗುವಾಗುತ್ತಾರೆ. ಮುಂದಿನ ಬೆಳೆಯಾದರೂ ಕೈ ಹಿಡಿದೀತೆಂಬ ವಿಶ್ವಾಸ ಕಣ್ಣುಗಳಲ್ಲಿ ಮಿಂಚತೊಡಗುತ್ತದೆ.

ಜಿಲ್ಲೆಯಾದ್ಯಂತ ಗುರುವಾರ ಎಳ್ಳು ಅಮಾವಾಸ್ಯೆಯ ದಿನ ತಮ್ಮ ಜಮೀನುಗಳಿಗೆ ತೆರಳಿ, ಭೂಮಿ ತಾಯಿಗೆ ಪೂಜೆ ಸಲ್ಲಿಸಿ, ವಿಧ ವಿಧದ ಭಕ್ಷ್ಯಗಳನ್ನು ನೈವೇದ್ಯ ಅರ್ಪಿಸಿ, ತಾವೂ ಪ್ರಸಾದ ಭೋಜನ ಸೇವಿಸಿ ಸಂಭ್ರಮಿಸಿದರು. ಉತ್ತರ ಕರ್ನಾಟಕದ ಎಳ್ಳ ಅಮವಾಸ್ಯೆಯೆಂದರೆ 'ರೈತರ ಹಬ್ಬ' ಎಂದೇ ಪ್ರಸಿದ್ಧಿ ಪಡೆದಿದೆ.

ಬೆಳಿಗ್ಗೆಯಿಂದಲೇ ಚರಗ ಚೆಲ್ಲುವ ಉತ್ಸಾಹದಲ್ಲಿದ್ದ ರೈತರ ಮನೆಗಳಲ್ಲಿ ಹಬ್ಬದ ತಯಾರಿ ಜೋರಾಗಿಯೇ ನಡೆದಿತ್ತು. ಉತ್ತರ ಕರ್ನಾಟಕದ ಜವಾರಿ ಅಡುಗೆಯ ಘಮಘಮ, ಜಮೀನುಗಳಲ್ಲಿ ಅನ್ನದಾತರ ಸಂಭ್ರಮ, ಮನೆಯಲ್ಲಿ ಭರ್ಜರಿ ಅಡುಗೆ ತಯಾರಿಸಿ, ಹೊಸ ಬಟ್ಟೆ ತೊಟ್ಟು, ಊಟದ ಬುತ್ತಿ ಗಂಟಿನೊಂದಿಗೆ



ಹೊಲಗಳತ್ತ ಹೆಜ್ಜೆ ಹಾಕುವ ಗಡಿಬಿಡಿ ಎಲ್ಲೆಡೆ ಕಂಡುಬಂದಿತು. ವರ್ಷವಿಡೀ ದುಡಿದು ದಣಿದ ದೇಹಗಳಿಗೆ ಇದು ಸಂಭ್ರಮಿಸುವ ದಿನ. ಅನ್ನ ನೀಡುವ ಭೂ ತಾಯಿಗೆ ಸೀಮಂತ ಮಾಡಿ ಉಣ ಬಡಿಸುವ ಸಂತಸದ ದಿನ.

ಗದಗ ಜಿಲ್ಲೆಯ ರೋಣ, ನರಗುಂದ, ಮುಂಡರಗಿ, ಶಿರಹಟ್ಟಿ, ಲಕ್ಷ್ಮೇಶ್ವರ, ಗಜೇಂದ್ರಗಡ, ಗದಗ ಏಳೂ ತಾಲೂಕುಗಳಲ್ಲಿ



ಉತ್ತರ ಕರ್ನಾಟಕ ಭಾಗದ ಅದರಲ್ಲೂ ಗದಗ ಜಿಲ್ಲೆಯ ತಿಮ್ಮಾಪೂರ ಗ್ರಾಮದಲ್ಲಿ ಎಳ್ಳ ಅಮಾವಾಸ್ಯೆಯ ಹಬ್ಬ ವಿಶೇಷ ಮಹತ್ವ ಪಡೆದಿದೆ. ಉಳಿದ ಭಾಗಗಳಿಗಿಂತಲೂ ತಿಮ್ಮಾಪೂರ ಗ್ರಾಮದಲ್ಲಿ ಚರಗ ಚೆಲ್ಲುವ ಹಬ್ಬದ ಸಂಭ್ರಮ ತುಸು ಜೋರಾಗಿಯೇ ಇರುತ್ತದೆ. ಹಸಿರು ಹೊದ್ದು ಕಂಗೊಳಿಸುವ ಭೂರಮೆಗೆ ಬಾಗಿನ ಅರ್ಪಿಸಿ, ಬಿತ್ತಿದ ಬೆಳೆ ಹುಲುಸಾಗಿ ಬೆಳೆದು ಉತ್ತಮ ಇಳುವರಿ ಬರಲಿ ಎಂದು ವಿಶಿಷ್ಟವಾಗಿ ಎಳ್ಳ ಅಮಾವಾಸ್ಯೆಯನ್ನು ಕರ್ನಾಟಕ ರಾಜ್ಯ ರೈತ ಸಂಘದ ಗದಗ ಜಿಲ್ಲಾ ಅಧ್ಯಕ್ಷ ಯಲ್ಲಪ್ಪ ಎಚ್.ಬಾಬರಿ ಅವರು ತಮ್ಮ ಜಮೀನಿನಲ್ಲಿ ಕುಟುಂಬ ಸಮೇತ ಆಚರಣೆ ಮಾಡುವುದರ ಮೂಲಕ ಸಂಭ್ರಮಿಸಿದರು.

ಭೀಕರ ಬರಗಾಲ ತಾಂಡವವಾಡುತ್ತಿದೆ. ಬಿತ್ತಿದ ಬೆಳೆಗಳು ಅಲ್ಲಲ್ಲಿಯೇ ಒಣಗಿ ಹೋಗಿವೆ. ಅಳಿದುಳಿದ ಬೆಳೆಗಳನ್ನು ಕಾಪಾಡಿಕೊಂಡಿದ್ದಾರೆ. 'ಇಂತಹ ಸಂಕಷ್ಟಗಳು ಇದ್ದೇ ಇರ್ತಾವ, ಭೂಮ್ತಾಯಿಯ ಹಬ್ಬ ಬಿಡಾಕಾಗ್ತದೇನು? ಇಂದಲ್ಲ ನಾಳೆ ಆ ತಾಯಿ ನಮ್ಮ ಕೈ ಹಿಡೀತಾಳ...' ಎಂಬ ನಂಬಿಕೆ-ವಿಶ್ವಾಸದಿಂದಲೇ ಬುತ್ತಿ ಗಂಟಿನೊಂದಿಗೆ ತಮ್ಮ ತಮ್ಮ ಹೊಲಗಳತ್ತ ಹೆಜ್ಜೆ ಹಾಕಿದರು.

ಜಮೀನಿನಲ್ಲಿರುವ ಬನ್ನಿ ಮರಕ್ಕೆ ಸೀರೆ ತೊಡಿಸಿ, ಉಡಿ ತುಂಬಿ, ಕೈಗೆ ಕಂಕಣ ಕಟ್ಟಿ ಪೂಜೆ ಸಲ್ಲಿಸಿದ್ದಲ್ಲದೆ, ಐದು





ಕಲ್ಲುಗಳನ್ನಿಟ್ಟು ಪಂಚಪಾಂಡವರೆಂದು ಪೂಜಿಸಿ ನೈವೇದ್ಯ ಸಮರ್ಪಿಸಿದರು. 'ಹುಲ್ಲುಲಿಗೋ... ಚಳಾಂಬ್ರಿಗೋ...' ಎಂದು ಸಿಹಿ ತಿನಿಸುಗಳನ್ನು ಹೊಲದ ಸುತ್ತ ಎರಚಿ ಮಳೆ-ಬೆಳೆ ಚೆನ್ನಾಗಿ ಆಗಲೆಂದು ಭಕ್ತಿಯಿಂದ ಬೇಡಿಕೊಂಡರು.

ಸಜ್ಜೆ ರೊಟ್ಟಿ, ಜೋಳದ ರೊಟ್ಟಿ, ಎಳ್ಳು ಹೋಳಿಗೆ, ಸೇಂಗಾ ಹೋಳಿಗೆ, ಕರಿಗಡಬು, ಕರ್ಚಿಕಾಯಿ, ಬಜ್ಜಿ, ವಿವಿಧ ಬಗೆಯ ಚಟ್ನಿ ತಂದು ಕುಟುಂಬದವರೆಲ್ಲರೂ ಒಟ್ಟಿಗೆ ಪೂಜೆ ಸಲ್ಲಿಸಿ, ಒಟ್ಟಿಗೇ ಕುಳಿತು ಊಟ ಮಾಡಿ ಸಂಭ್ರಮಿಸುವುದು ಈ ಹಬ್ಬದ ಇನ್ನೊಂದು ವಿಶೇಷ.


---

## ಜಿಲ್ಲಾಡಳಿತದಿಂದ 'ಸ್ವಾಮಿ ವಿವೇಕಾನಂದ ಜಯಂತಿ'

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಯುವ ಸಂಘಗಳ ಒಕ್ಕೂಟದ ವತಿಯಿಂದ ಜ.12ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಸಭಾವನದಲ್ಲಿ 2023-24ನೇ ಸಾಲಿನ ಗದಗ ಜಿಲ್ಲಾ ಮಟ್ಟದ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮ ಜರುಗಲಿದೆ.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಿಜಯನಗರ-ಗದಗದ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿ



ಹಾಗೂ ಹುಲಕೋಟಿ-ಗದಗದ ರಾಮಕೃಷ್ಣ ವಿವೇಕಾನಂದ ಸೇವಾ ಪ್ರತಿಷ್ಠಾನದ ಅಧ್ಯಕ್ಷರಾದ ಬ್ರಹ್ಮಚಾರಿ ಅದ್ವೈತ ಚೈತನ್ಯ (ಪುನೀತ ಮಹಾರಾಜ್) ಅವರು ವಹಿಸಲಿದ್ದಾರೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಯುವ ಸಬಲೀಕರಣ

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸುವರು.

ಮತ್ತು ಕ್ರೀಡಾ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರಾದ ಬಿ.ನಾಗೇಂದ್ರ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕ ಸಿ.ಸಿ. ಪಾಟೀಲ, ರೋಣ ಶಾಸಕ ಜಿ.ಎಸ್. ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ-ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ, ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರಾದ ಎನ್.ಶಶಿಕುಮಾರ್ ಅವರು ಆಗಮಿಸುವರು.

ಗದಗ ಕೆವಿಎಸ್ಆರ್ ಪ.ಪೂ ಮಹಾವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯ ಅನಿಲ ವೈದ್ಯ ಉಪನ್ಯಾಸ ನೀಡಲಿದ್ದಾರೆ. ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಶರಣು ಗೋಗೇರಿ ಸರ್ವರಿಗೂ ಸ್ವಾಗತ ಕೋರಿದ್ದಾರೆ.

---

### ಸದನದಲ್ಲಿ ಸಚಿವ ಎಚ್.ಕೆ.ಪಾಟೀಲ

## ಐದು ಸಂಪುಟಗಳ ಲೋಕಾರ್ಪಣೆ ನಾಳೆ

**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ವಿಧಾನ ಪರಿಷತ್ತಿನಲ್ಲಿ 1984 ರಿಂದ 2008 ರವರೆಗೆ ಸದಸ್ಯರಾಗಿ, ವಿರೋಧ ಪಕ್ಷದ ನಾಯಕರಾಗಿ, ಸಭಾ ನಾಯಕರಾಗಿ, ಸಚಿವರಾಗಿ ಸದನದಲ್ಲಿ ಎಚ್.ಕೆ.ಪಾಟೀಲ ಅವರು ಮಾಡಿದ ಚರ್ಚೆ, ಮಂಡನೆ, ಭಾಷಣಗಳ ಮತ್ತು ಆಚಾರ-ವಿಮರ್ಶೆಗಳ ಸಂಪುಟಗಳ ಲೋಕಾರ್ಪಣೆ ಕಾರ್ಯಕ್ರಮವು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಭವನದಲ್ಲಿ ಜನವರಿ 13 ರಂದು ಬೆಳಿಗ್ಗೆ 11 ಗಂಟೆಗೆ ಜರುಗಲಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ಅಧ್ಯಕ್ಷತೆ ವಹಿಸಲಿದ್ದು, ವಿಧಾನಸಭೆ ಸಭಾಧ್ಯಕ್ಷರಾದ ಯು.ಟಿ. ಖಾದರ್ ಫರೀದ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಕಾರ್ಮಿಕ ಸಚಿವ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್ ಎಸ್ ಲಾಡ್, ವಿಧಾನ ಪರಿಷತ್ ವಿಶ್ರಾಂತ ಸಭಾಪತಿಗಳಾದ ಡಾ.ಬಿ.ಎಲ್. ಶಂಕರ್, ವಿ.ಆರ್.ಸುದರ್ಶನ್, ವೀರಣ್ಣ ಮತ್ತಿಕಟ್ಟಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತಿ ವಹಿಸಲಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಕೆ.ಬಿ.ಗುಡಸಿ, ಕರ್ನಾಟಕ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಪಿ.ಎಲ್. ಪಾಟೀಲ ವಿಶೇಷ ಅತಿಥಿಗಳಾಗಿ ಆಗಮಿಸುವರು.

ಆಂಧ್ರ ಪ್ರದೇಶದ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತೇಜಸ್ವಿ ಕಟ್ಟಿಮನಿ, ಕರ್ನಾಟಕ ಸಂಶೋಧಕರ ಒಕ್ಕೂಟದ ಅಧ್ಯಕ್ಷರಾದ ಕಾ.ತ. ಚಿಕ್ಕಣ್ಣ, ನೆಲದನುಡಿ ದಿನಪತ್ರಿಕೆಯ ಸಂಪಾದಕರಾದ ನೂರಅಹ್ಮದ್ ಮಕಾನದಾರ್, ಕರ್ನಾಟಕ ಸಂಶೋಧಕರ ಒಕ್ಕೂಟದ ಸಂಪುಟಗಳ ಸಂಪಾದಕರು, ಕಾರ್ಯದರ್ಶಿ ಡಾ. ರೇವಯ್ಯ ಒಡೆಯರ್ ಸ್ವಾಗತ ಕೋರಿದ್ದಾರೆ.

---

## ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಗದಗ ಜಿಲ್ಲಾ ಪ್ರವಾಸ

**■ವಿಜಯಸಾಕ್ಷಿ ಸುದ್ದಿ, ಗದಗ**



ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಜನವರಿ 12 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದು, ವಿವರ ಇಂತಿದೆ. ಜ. 12ರಂದು ಬೆಳಿಗ್ಗೆ 9 ಗಂಟೆಗೆ ಬೆಳಗಾವಿಯಿಂದ ರಸ್ತೆ ಮೂಲಕ ಹೊರಟು ಬೆಳಿಗ್ಗೆ 11ಗಂಟೆಗೆ ಗದುಗಿಗೆ ಆಗಮಿಸುವರು. ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಸಭಾಭವನದಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 12ಗಂಟೆಗೆ ಬಿಂಕದಕಟ್ಟಿಯ ರಾಮಕರುಣಾನಂದ ರಂಗಮಂದಿರದಲ್ಲಿ ಸಹಕಾರ ರತ್ನ ದಿ. ಶ್ರೀ ಎಂ.ವಿ. ಮೂಲಿಮನಿ ಅವರ 93ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಸಂಜೆ 4.30 ಗಂಟೆಗೆ ಗದಗಿನಿಂದ ರಸ್ತೆ ಮೂಲಕ ಸೂರಣಗಿ ಗ್ರಾಮಕ್ಕೆ ಆಗಮಿಸಿ ಲಕ್ಷ್ಮೇಶ್ವರ ತಾಲೂಕು ಸೂರಣಗಿ ಗ್ರಾಮದಲ್ಲಿ ವಿದ್ಯುತ್ ತಗುಲಿ ಮರಣ ಹೊಂದಿದ ಯುವಕರ ಕುಟುಂಬಗಳನ್ನು ಭೇಟಿ ಮಾಡುವರು. ನಂತರ ಸಂಜೆ 6 ಗಂಟೆಗೆ ಸೂರಣಗಿ ಗ್ರಾಮದಿಂದ ರಸ್ತೆ ಮೂಲಕ ಹುಬ್ಬಳ್ಳಿಗೆ ಪ್ರಯಾಣ ಮಾಡುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

---

## ಸಚಿವ ಹೆಚ್.ಕೆ. ಪಾಟೀಲರಿಂದ ಸೂರಣಗಿ ಭೇಟಿ ಇಂದು

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಕರ್ನಾಟಕ ಸರಕಾರದ ಕಾನೂನು ಮತ್ತು ಸಂಸದೀಯ ವ್ಯವಹಾರ, ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಕೆ. ಪಾಟೀಲ್ ಅವರು ಶುಕ್ರವಾರ ಸಾಯಂಕಾಲ 4.30ಕ್ಕೆ ಸೂರಣಗಿ ಗ್ರಾಮಕ್ಕೆ ಭೇಟಿ ನೀಡಿ, ತಾಲೂಕಿನ ಸೂರಣಗಿ ಗ್ರಾಮದಲ್ಲಿ ಇತ್ತೀಚೆಗೆ ವಿದ್ಯುತ್ ಅವಘಡದಲ್ಲಿ ಮೃತರಾದ ಯುವಕರ ಕುಟುಂಬಕ್ಕೆ ಸಾಂತ್ವನ ಹೇಳಲಿದ್ದಾರೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸುಜಾತ ದೊಡ್ಡಮನಿ ಮಾಹಿತಿ ನೀಡಿದ್ದಾರೆ.

---

### ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಹಿನ್ನೆಲೆ; ಇಂದು ಪೂರ್ವಭಾವಿ ಸಭೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಸರ್ಕಾರದ ಆದೇಶದನ್ವಯ ಜನವರಿ 21 ರಂದು ಆಚರಿಸಲಾಗುವ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ನಿಮಿತ್ತ ಜನವರಿ 12 ರಂದು ಬೆಳಿಗ್ಗೆ 11 ಗಂಟೆಗೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಗದಗ, ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

ಸಭೆಗೆ ಹಾಜರಾಗಿ ಸಲಹೆ/ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

### ಜನತಾ ದರ್ಶನ ಕಾರ್ಯಕ್ರಮ ಮುಂದೂಡಿಕೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಜನವರಿ 12 ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರ ಅಧ್ಯಕ್ಷತೆಯಲ್ಲಿ ಮುಂಡರಗಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಿಗದಿಯಾಗಿದ್ದ ಜನತಾ ದರ್ಶನ ಕಾರ್ಯಕ್ರಮವನ್ನು ಜನವರಿ 16 ಕ್ಕೆ ಮುಂದೂಡಲಾಗಿದೆ.

---

### ಹಾಲಕೆರೆ 'ಅಕ್ಷರ ಜಾತ್ರೆ'ಯಲ್ಲಿ ಜ. 13ರಂದು ಹಾಸ್ಯ ಸಂಜೆ ಕಾರ್ಯಕ್ರಮ

## ನಾಳೆ ಶ್ರೀ ಅನ್ನದಾನೇಶ್ವರ ಜಾತ್ರಾ ಮಹೋತ್ಸವ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಇಲ್ಲಿನ ಹಾಲಕೆರೆ ಶ್ರೀ ಅನ್ನದಾನೇಶ್ವರ ಜಾತ್ರಾ ಮಹೋತ್ಸವ ಜ.13, 14ರಂದು ವೈಶಿಷ್ಟ್ಯಪೂರ್ಣವಾಗಿ ಜರುಗಲಿದೆ. ಈ ಸಲದ ಜಾತ್ರೆಯನ್ನು 'ಅಕ್ಷರ ಜಾತ್ರೆ' ಎಂದು ಕರೆಯಲಾಗಿದ್ದು, ಅಕ್ಷರದ ಮಹತ್ವವನ್ನು ಸಾರುವುದಕ್ಕಾಗಿ ಈ ಜಾತ್ರೆಯಲ್ಲಿ ಹೆಚ್ಚಿನ ಮಹತ್ವ ನೀಡಲಾಗಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ಜ. 13ರ ಮುಂಜಾನೆ 10ಕ್ಕೆ ಅಕ್ಷರ ಉತ್ಸವಕ್ಕೆ ಚಾಲನೆ ನೀಡಲಾಗುತ್ತಿದೆ. ಒಳಬಳ್ಳಾರಿಯ ಸುವರ್ಣಗಿರಿ ವಿರಕ್ತಮಠದ ಪೂಜ್ಯ ಸಿದ್ಧಲಿಂಗ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಅಧ್ಯಕ್ಷತೆಯನ್ನು ನಂದವಾಡಗಿ-ಜಾಲವಾದಿ ಶ್ರೀ ಮಹಾಂತೇಶ್ವರ ಹಿರೇಮಠದ ಪೂಜ್ಯ ಮಹಾಂತಲಿಂಗ ಶಿವಾಚಾರ್ಯರು ವಹಿಸಲಿದ್ದಾರೆ. ಕರೇಗುಡ್ಡದ ಮಹಾಂತಲಿಂಗ ಶಿವಾಚಾರ್ಯರು, ಅಡವಿ ಅಮರೇಶ್ವರ ಮಠದ ತೋಂಟದಾರ್ಯ ಮಹಾಸ್ವಾಮಿಗಳು, ಹೊಸಪೇಟೆ ಕೆಂಪಿನಮಠದ ಚಂದ್ರಶೇಖರ ದೇವರು, ಹಳಿಂಗಳಿ ಕಮರಿಮಠದ ಶಿವಾನಂದ ದೇವರು ಸಮ್ಮುಖವನ್ನು ವಹಿಸಲಿದ್ದಾರೆ. ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ, ಯಲಬುರ್ಗಾ ಶಾಸಕ ಬಸವರಾಜ ರಾಯರೆಡ್ಡಿ, ಕುಷ್ಟಗಿಯ ಮಾಜಿ ಶಾಸಕ ಅಮರೇಗೌಡ ಬಯ್ಯಾಪೂರ ಮುಖ್ಯ ಅತಿಥಿಗಳಾಗಿ



ಪಾಲ್ಗೊಳ್ಳಲಿದ್ದಾರೆ.

ಮಾಜಿ ಶಾಸಕ ಡಿ.ಆರ್. ಪಾಟೀಲ, ವಿ.ಪ ಸದಸ್ಯ ಎಸ್.ವಿ. ಸಂಕನೂರ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಮಾಜಿ ಸಚಿವ ಕಳಕಪ್ಪ ಬಂಡಿ, ಉಪನ್ಯಾಸಕ ನಾಗರಾಜ ಹೊನ್ನೂರ ರಚಿಸಿರುವ 'ಕೃಷಿಯಕ್ಷರ ಯೋಗಿ' ಕವನ ಸಂಕಲನವನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ಶಿಕ್ಷಣ ಪ್ರೇಮಿ, ರಾಜ್ಯ ಸಭಾ ಮಾಜಿ ಸದಸ್ಯ ಬಸವರಾಜ ಪಾಟೀಲ ಸೇಡಂ, ಬಾಗಲಕೋಟೆಯ ಮಾಜಿ ಶಾಸಕ ವೀರಣ್ಣ ಚರಂತಿಮಠ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ.

ಮಧ್ಯಾಹ್ನ 12ಕ್ಕೆ ಪೂಜ್ಯ ಶ್ರೀ ಲಿಂ. ಹಿರಿಯ ಅನ್ನದಾನ ಮಹಾಸ್ವಾಮಿಗಳವರ 111ನೇ ಪುಣ್ಯ ಸ್ಮರಣೋತ್ಸವ ಹಾಗೂ ಲಿಂ. ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳವರ 2ನೇ ಪುಣ್ಯ ಸ್ಮರಣೋತ್ಸವದ ನಿಮಿತ್ತ ಮಹಾ ಗಣಾರಾಧನೆ ಜರುಗಲಿದ್ದು, ನರೇಗಲ್ಲದ ಸಂಗಮೇಶ ಅಂದಪ್ಪ ಕುರಿ ಹಾಗೂ ಕುಟುಂಬದವರು ಭಕ್ತಿ ಸೇವೆಯನ್ನು ವಹಿಸಿಕೊಂಡಿದ್ದಾರೆ.

ಮಧ್ಯಾನ್ಹ 2.30ಕ್ಕೆ ಸುಮಾರು 6 ಸಾವಿರ ವಿದ್ಯಾರ್ಥಿಗಳಿಗಾಗಿ 'ಅಕ್ಷರ ಜಾತ್ರೆ' ಕಾರ್ಯಕ್ರಮ ಜರುಗಲಿದ್ದು, ಗದಗ-ವಿಜಯಪುರದ ಶ್ರೀ ರಾಮಕೃಷ್ಣ ವಿವೇಕಾನಂದಾಶ್ರಮದ ಪೂಜ್ಯ ಸ್ವಾಮಿ ನಿರ್ಭಯಾನಂದ ಸರಸ್ವತಿ ಮಹಾಸ್ವಾಮಿಗಳು ವಿದ್ಯಾರ್ಥಿ ಗಳಿಗೆ ವಿಶೇಷ ಆಶೀರ್ವಚನ ದಯಪಾಲಿಸುವರು. ಸೇಡಂನ ಪೂಜ್ಯ ಶ್ರೀ ಸದಾಶಿವ ಮಹಾಸ್ವಾಮಿಗಳು ಸಮ್ಮುಖ ವಹಿಸಲಿದ್ದು, ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಯುವಜನ ಸೇವೆ, ಕ್ರೀಡಾ ಸಚಿವ ಬಿ. ನಾಗೇಂದ್ರ ಗದಗನ ಶ್ರೀ ಅನ್ನದಾನೇಶ್ವರ ವಿಜ್ಞಾನ ಪ.ಪೂ ಮಹಾವಿದ್ಯಾಲಯದ ನೂತನ ಕಟ್ಟಡದ ಶಂಕು ಸ್ಥಾಪನೆ ನೆರವೇರಿಸಲಿದ್ದಾರೆ. ರೋಣ ಶಾಸಕ ಜಿ.ಎಸ್. ಪಾಟೀಲ ಶ್ರೀ ಅನ್ನದಾನೇಶ್ವರ ನಗರ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

ಸಾಯಂಕಾಲ 7ಕ್ಕೆ ಅಕ್ಷರ ಜಾತ್ರೆಯ ನಿಮಿತ್ತ ವಿಶೇಷ ಹಾಸ್ಯ ಸಂಜೆ ಜರುಗಲಿದ್ದು, ಗಂಗಾವತಿಯ ಅಭಿನವ ಬೀಚಿ ಬಿ. ಪ್ರಾಣೇಶ್, ಬಸವರಾಜ ಮಹಾಮನಿ ಮತ್ತು ನರಸಿಂಹ ಜೋಷಿ ಪಾಲ್ಗೊಂಡು ಜನತೆಗೆ ಹಾಸ್ಯದ ರಸದೌತಣ ಉಣ ಬಡಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಸಾಕ್ಷಿ ಸುಭಾಷಿತ

ಸಾಧ್ಯವಾದರೆ ಹತ್ತು ಜನರಿಗೆ ನೆರವಾಗು, ಆಗದಿದ್ದರೆ ಹಾದಿಯಲ್ಲಿ ಕಾಣುವ ಗಾಜಿನ ಚೂರನ್ನಾದರೂ ಹೆಕ್ಕಿ ಕಸದ ತೊಟ್ಟಿಗೆ ಹಾಕು.

–ಕಣ್ಣದಾಸನ್

## ಸಂಪಾದಕೀಯ

# ಅಧಿಕಾರವೇ ರಾಜಕೀಯ ಉದ್ದೇಶ

ಒಂದು ಕಾಲದಲ್ಲಿ ಜನಸೇವೆ ರಾಜಕೀಯದ ಉದ್ದೇಶವಾಗಿತ್ತು. ಆದರೆ ಆ ಕಾಲ ಬಹುಬೇಗ ಮರೆಯಾಗಿ, ಹಣ ಗಳಿಕೆ ರಾಜಕೀಯದ ಉದ್ದೇಶವಾಗಿ ಬದಲಾಯಿತು. ಆದರೆ ಈಗ ಹಣ ಗಳಿಕೆ ಜೊತೆಗೆ ಅಧಿಕಾರವೇ ರಾಜಕೀಯ ಉದ್ದೇಶವಾಗಿ ಬದಲಾಗಿದೆ.

ಇದು ಯಾವುದೇ ಒಂದು ಪಕ್ಷವನ್ನು ಉದ್ದೇಶಿಸಿ ವ್ಯಕ್ತಪಡಿಸಿದ ಅಭಿಪ್ರಾಯ ಅಲ್ಲ. ಭಾರತದಲ್ಲಿ ಅಸ್ತಿತ್ವದಲ್ಲಿರುವ ಮತ್ತು ಅಧಿಕಾರದಲ್ಲಿರುವ ಎಲ್ಲ ರಾಜಕೀಯ ಪಕ್ಷಗಳ ಉದ್ದೇಶ ಅಧಿಕಾರ ಪಡೆಯುವುದೇ ಆಗಿದೆ. ಅಧಿಕಾರ ಸಿಗದಿದ್ದರೆ ಜನಸೇವೆ ಇಲ್ಲ ಎನ್ನುವಷ್ಟರ ಮಟ್ಟಿಗೆ ರಾಜಕೀಯದ ಉದ್ದೇಶವೇ ಬುಡಮೇಲಾಗಿದೆ.

ಅದರಲ್ಲೂ 2014ರ ನಂತರ ಕೇಂದ್ರದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ನಂತರ ರಾಜಕೀಯ ಪಕ್ಷಗಳಲ್ಲಿ ಅಧಿಕಾರದ ಹಪಾಹಪಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಷ್ಟೆ ಏರಿಕೆಯಾಗಿದೆ. ಭವಿಷ್ಯದಲ್ಲಿ ಮತ್ತಷ್ಟು ಏರಿಕೆಯಾಗುವುದು ನಿಶ್ಚಿತ.

ಸದ್ಯದ ಲೋಕಸಭೆ ಚುನಾವಣೆಯನ್ನು ಗಮನಿಸಿದಾಗ ಈ ಅಧಿಕಾರದ ಹಪಾಹಪಿ ಏಷ್ಟರ ಮಟ್ಟಿಗೆ ಇದೆ ಎನ್ನುವುದು ಸ್ಪಷ್ಟವಾಗುತ್ತದೆ. 10 ವರ್ಷ ಕೇಂದ್ರದಲ್ಲಿ ಅಧಿಕಾರ ನಡೆಸಿದರೂ ಸೋಲಿನ ಭಯ ಅನುಭವಿಸುತ್ತಿರುವ ಬಿಜೆಪಿ, ಲೋಕಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಲು ಇನ್ನಿಲ್ಲದ ತಂತ್ರಗಾರಿಕೆ ಅನುಸರಿಸುತ್ತಿದೆ. ಕಳೆದೊಂದು ದಶಕದಲ್ಲಿ ಬಿಜೆಪಿ ನಿಜವಾಗಿಯೂ ಜನಮೆಚ್ಚುವ ಕೆಲಸ ಮಾಡಿದ್ದರೆ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿರಲಿಲ್ಲ.

ಬಿಜೆಪಿ ಈ ಚುನಾವಣೆಯನ್ನು ಇಷ್ಟೊಂದು ಗಂಭೀರವಾಗಿ ಪರಿಗಣಿಸಿರುವುದನ್ನು ನೋಡಿದರೆ, ಅಧಿಕಾರ ರಾಜಕೀಯ ಪಕ್ಷಗಳಿಗೆ ಎಷ್ಟು ಮುಖ್ಯ ಎನ್ನುವುದು ಅರ್ಥವಾಗುತ್ತದೆ. ಇನ್ನು ಕಾಂಗ್ರೆಸ್ ಸಹ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ. ಅಧಿಕಾರಕ್ಕಾಗಿ ಇಂಡಿಯಾ ಮೈತ್ರಿಕೂಟದ ಮೊರೆ ಹೋಗಿದೆ. ರಾಹುಲ್ ಗಾಂಧಿ ನೇತೃತ್ವದಲ್ಲಿ ಮತ್ತೊಂದು ಯಾತ್ರೆ ನಡೆಸುತ್ತಿದೆ. ರಾಜ್ಯದ ವಿಷಯಕ್ಕೆ ಬರುವುದಾದರೆ, ಈ ಬಾರಿ ಪ್ರಭಾವಿ ಸಚಿವರು ಲೋಕಸಭೆ ಚುನಾವಣೆಯಲ್ಲಿ ಗೆದ್ದು ಬರಬೇಕಾದ ಅನಿವಾರ್ಯತೆ ಎದುರಾಗಿದೆ.

ಇವೆಲ್ಲವೂ ಅಧಿಕಾರಕ್ಕಾಗಿ. ಅಧಿಕಾರದ ಜೊತೆ ಹಣ ಗಳಿಕೆ ಉದ್ದೇಶ ಇದ್ದೆ ಇರುತ್ತದೆ. ಎಲ್ಲರಿಗೂ ಹಣ ಗಳಿಕೆಯ ಉದ್ದೇಶ ಇಲ್ಲದಿರಬಹುದು. ಆದರೆ ಅಧಿಕಾರದ ಉದ್ದೇಶ ಮಾತ್ರ ಇದ್ದೆ ಇರುತ್ತದೆ. ರಾಜಕೀಯ ಎಂದರೆ ಅಧಿಕಾರ ಪಡೆಯುವುದೇ ಅಲ್ಲವೇ ಎಂದು ಜನ ಸಹಜವಾದ ಪ್ರಶ್ನೆ ಕೇಳುತ್ತಾರೆ. ಆ ಮಟ್ಟಿಗೆ ರಾಜಕೀಯವನ್ನು ಕೇವಲ ಅಧಿಕಾರದ ಚೌಕಟ್ಟಿಗೆ ಸೀಮಿತಗೊಳಿಸಲಾಗಿದೆ. ರಾಜಕೀಯದ ವ್ಯಾಖ್ಯಾನದ ಕುರಿತು ಜನ ಜಾಗೃತರಾಗದ ಹೊರತು ರಾಜಕೀಯ ಎಂದರೆ ಅಧಿಕಾರ ಎಂದಷ್ಟೆ ಭಾವಿಸಬೇಕಾಗಿದೆ.

# ‘ರಾಷ್ಟ್ರೀಯ ಯುವ ದಿನಾಚರಣೆ’ ಸ್ಪರ್ಧೆಗಳು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದ ತಾಯಿ ಪಾರ್ವತಿ ಮಕ್ಕಳ ಬಳಗದ ಕಲಾ ಹಾಗೂ ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಯೋಜನೆ ಸಹಯೋಗದಲ್ಲಿ ಜ.12ರಂದು ‘ರಾಷ್ಟ್ರೀಯ ಯುವ ದಿನಾಚರಣೆ’ ಅಂಗವಾಗಿ ಪಿಯುಸಿ ವಿದ್ಯಾರ್ಥಿನಿಯರಿಗೆ ತಾಲೂಕು ಮಟ್ಟದ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ಪ್ರಬಂಧ–ಆಧುನಿಕ ಸಂಸ್ಕೃತಿಯಲ್ಲಿ ಯುವತಿಯರ ಪಾತ್ರ, ಚಿತ್ರಕಲೆ–ಸ್ವಾಮಿ ವಿವೇಕಾನಂದರ ಭಾವಚಿತ್ರ, ಭಾಷಣ–ಸ್ವಾಮಿ ವಿವೇಕಾನಂದರ ಆದರ್ಶಗಳು ವಿಷಯದ ಮೇಲೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಹೆಸರು ನೋಂದಾಯಿಸಲು ಕಾಲೇಜಿನ ಕಾರ್ಯಾಲಯವನ್ನು ಸಂಪರ್ಕಿಸಬಹುದು ಎಂದು ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆಯ ಪ್ರಯುಕ್ತ ಲೇಖನ

# ಸ್ವಾಮಿ ವಿವೇಕಾನಂದ ಎಂಬ ಅದ್ಭುತ ಶಕ್ತಿ

ಸ್ವಾಮಿ ವಿವೇಕಾನಂದರು ಇಂದಿಗೂ ಕೋಟ್ಯಾಂತರ ಯುವಕರಿಗೆ ಸ್ಫೂರ್ತಿ. ಅವರ ಜೀವನ, ಅವರು ತೋರಿದ ಸನ್ಮಾರ್ಗಗಳು ಇಂದಿಗೂ ಭಾರತೀಯರಿಗೆ ಆದರ್ಶವಾಗಿವೆ. ನರೇಂದ್ರನಿಂದ ವಿವೇಕಾನಂದ ಆದ ಅವರ ಬದುಕಿನ ದಾರಿ ಕೊನೆಯಿಲ್ಲದ ಪಾಠಗಳನ್ನು ಹೇಳುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಸ್ವಾಮಿ ವಿವೇಕಾನಂದರು ಒಬ್ಬ ಮಹಾನ್ ಗುರು ಹಾಗೂ ಶಸ್ತ್ರಾಸ್ತ್ರಗಳಿಲ್ಲದ ಯೋಧ ಎಂದು ಹೇಳಬಹುದು. ವಿವೇಕಾನಂದರು ವೃತ್ತಿಪರ ದಾರ್ಶನಿಕರಲ್ಲವಾದರೂ, ಶ್ರೇಷ್ಠ ದಾರ್ಶನಿಕ. ವಿವೇಕಾನಂದರು ವೃತ್ತಿಪರ ರಾಜಕಾರಣಿಗಳಲ್ಲವಾದರೂ ಅವರ ಸಂದೇಶಗಳು ರಾಜಕಾರಣಿಗಳ ಕಣ್ಣು ತೆರೆಸಿವೆ.

ನರೇಂದ್ರನಾಥ ದತ್ತನಾಗಿ ಸ್ವಾಮಿ ವಿವೇಕಾನಂದರು ಜ.12, 1863ರಂದು ಕಲ್ಕತ್ತಾದ ಶಿಮ್ಲಾಪಲ್ಲಿಯಲ್ಲಿರುವ ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ವಿಶ್ವನಾಥದತ್ತ ವಕೀಲರಾಗಿದ್ದರು ಮತ್ತು ಕಲ್ಕತ್ತದ ಹೈಕೋರ್ಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳ ಬಗ್ಗೆ ಪ್ರಗತಿಪರ ದೃಷ್ಟಿಕೊನವನ್ನು ಹೊಂದಿದ್ದರು. ತಾಯಿ ಭುವನೇಶ್ವರಿ ದೇವಿ ಧಾರ್ಮಿಕತೆ ಮೇಲೆ ನಂಬಿಕೆ ಹೊಂದಿದ್ದರು. ಮಕ್ಕಳಿಲ್ಲದ ಈ ದಂಪತಿಗಳು ಮಗುವಿಗಾಗಿ ವಾರಣಾಸಿಯಲ್ಲಿ ಶಿವನನ್ನು ಕುರಿತು ಪ್ರಾರ್ಥಿಸಿದರು. ಶಿವನ ಕನಸಿನಲ್ಲಿ ತನ್ನ ಧ್ಯಾನದಿಂದ ಎದ್ದು ಮಗುವನ್ನು ಕೊಡುವುದಾಗಿ ಹೇಳಿದನು. ಹಾಗೆ ಹುಟ್ಟಿದ ಮಗನೇ ನರೇಂದ್ರನಾಥ. ಅರ್ಥಾತ್ ಸ್ವಾಮಿ ವಿವೇಕಾನಂದರು. ಬಾಲ್ಯದಿಂದಲೂ ಚಿಂತನಾಶೀಲ ವ್ಯಕ್ತಿತ್ವ ರೂಢಿಸಿಕೊಂಡು ಮನಸ್ಸು ಮತ್ತು ದೇಹದ ಸ್ವಯಂ ನಿಯಂತ್ರಣದ ಶಕ್ತಿಯನ್ನು ತಾಯಿಯಿಂದ ಕಲಿತರು.

ವಿವೇಕಾನಂದರು ತಮ್ಮ ಜೀವನದಲ್ಲಿ ಶಿಕಾಗೊದ ವಿಶ್ವಧರ್ಮ ಸಮ್ಮೇಳನದಲ್ಲಿ ನೀಡಿದ ಭಾಷಣದಿಂದಾಗಿ ಹಿಂದೂ ಧರ್ಮ ವಿಶ್ವಕ್ಕೆ ಪರಿಚಿತವಾಯಿತು. ಹಿಂದೂ ಪರಂಪರೆ ಭಾರತದ ಗಡಿಗಳನ್ನು ದಾಟಿ ವಿಶ್ವ ವಿಖ್ಯಾತಿ ಹೊಂದುವಲ್ಲಿ ಸ್ವಾಮಿ ವಿವೇಕಾನಂದರ ಪಾತ್ರ ಹಿರಿದಾಗಿದೆ. ಅವರ ಪ್ರಕಾರ ಧರ್ಮವೆಂದರೆ ನಾವು ಮಾತನಾಡುವ ಪ್ರತಿಯೊಂದು ಪದದಲ್ಲಿ, ನಾವು ಮಾಡುವ ಪ್ರತಿಯೊಂದು ಕೆಲಸದಲ್ಲಿ ಸತ್ಯ, ಒಳ್ಳೆಯ ಆಲೋಚನೆಗಳು, ಒಳ್ಳೆಯ ನಡತೆ ವಿಜ್ರಂಭಿಸಬೇಕು. ಅದೇ ನಿಜವಾದ ಧರ್ಮವಾಗಿದೆ.



ಒಬ್ಬ ಕುಂಬಾರ ತನ್ನ ಮಡಕೆಯನ್ನು ಹೀಗೆ ಮಾಡಬೇಕೇಂಬ ಗುರಿಯನ್ನು ಹೊಂದಿರುತ್ತಾನೆ. ಒಬ್ಬ ಕಲೆಗಾರ ತನ್ನ ಚಿತ್ರ ಹೀಗೆ ಬಿಡಿಸಬೇಕೆಂಬ ಗುರಿ ಹೊಂದಿರುತ್ತಾನೆ. ಹಾಗೆಯೇ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಒಬ್ಬ ಶಿಕ್ಷನಿಗೆ ಬರೀ ಪಠ್ಯ–ಪುಸ್ತಕದಲ್ಲಿನ ವಿಷಯಗಳ ಅಧ್ಯಯನ ಮಾತ್ರ ಗುರಿಯಾಗಿಲ್ಲದೇ ವ್ಯಕ್ತಿಯ ಪರಿಪೂರ್ಣ ವ್ಯಕ್ತಿತ್ವ ವಿಕಸನವೇ ಶಿಕ್ಷಣದ ಗುರಿಯಾಗಿದೆ.

ಶಿಕ್ಷಣವೆಂದರೆ ಒಬ್ಬ ಮನುಷ್ಯ ತಲೆಯಲ್ಲಿ ಎಷ್ಟು ಜ್ಞಾನವನ್ನು ಇಟ್ಟುಕೊಂಡಿದ್ದಾನೆ ಎನ್ನುವುದಲ್ಲ, ಯಾವುದು ಒಬ್ಬ ಮನುಷ್ಯನ ಜೀವನ ನಿರ್ಮಿಸಲು, ಅವನ ನಡತೆಯನ್ನು ನಿರ್ಮಿಸಲು ಸಹಾಯಕವಾಗುತ್ತದೆಯೋ ಅದೇ ನಿಜವಾದ ಶಿಕ್ಷಣ. ನಮ್ಮ ಭಾರತೀಯ ಯುವಕರು ಪಾಶ್ಚಾತ್ಯರ ಕ್ರಿಯಾಶೀಲತೆ ಮತ್ತು ವೈಜ್ಞಾನಿಕದ ಜೊತೆಗೆ ನಮ್ಮ ಆಧ್ಯಾತ್ಮಿಕತೆಯನ್ನು ಬೆರೆಸಿದಾಗ ಮಾತ್ರ ಅಭಿವೃದ್ಧಿ ಕಟ್ಟಿಟ್ಟ ಬುತ್ತಿಯಾಗಿದೆ. ರಾಮಕೃಷ್ಣ ಪರಮಹಂಸರ ಪರಮ ಶಿಷ್ಯರಾಗಿದ್ದ ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್ ಸ್ಥಾಪಿಸಿದರು. ಅದರಿಂದ ಇಂದಿಗೂ ಸಹ ಯುವಕರಿಗೆ ಸ್ಫೂರ್ತಿ ಮತ್ತು ಪ್ರೇರಣೆ ನೀಡುತ್ತದೆ.

ಒಂದು ವಿಚಾರವನ್ನು ಆಯ್ಕೆ ಮಾಡಿಕೊಳ್ಳಿ. ಆ ವಿಚಾರವನ್ನು ನಿಮ್ಮ ಬದುಕು ಮಾಡಿಕೊಳ್ಳಿ. ಅದರ ಬಗ್ಗೆಯೇ ಚಿಂತಿಸಿ, ಅದರದೇ ಕನಸು ಕಾಣಿ, ಅದರಲ್ಲಿಯೇ ನಿಮ್ಮ ಮೆದುಳು–ನರನಾಡಿಗಳು, ಶರೀರದ ಎಲ್ಲಾ ಅಂಗಗಳಲ್ಲೂ ಅದೇ ತುಂಬಿರಲಿ. ಉಳಿದೆಲ್ಲ ವಿಚಾರಗಳನ್ನು ಬದಿಗೊತ್ತಿ. ಇದೇ ಯಶಸ್ಸಿನ ಹಾದಿ.

ನಿಯಂತ್ರಿತ ಮನಸ್ಸು ನಕಾರಾತ್ಮಕತೆಯಿಂದ ನಮ್ಮನ್ನು ರಕ್ಷಿಸುತ್ತದೆ, ನಕಾರಾತ್ಮಕ ಆಲೋಚನೆಗಳಿಂದ ನಮ್ಮನ್ನು ಮುಕ್ತಗೊಳಿಸುತ್ತದೆ. ನಿಮ್ಮ ಮನಸ್ಸನ್ನು ನಿಯಂತ್ರಿಸಲು ಸ್ವಯಂ ಅರಿವು ಉತ್ತಮ ಮಾರ್ಗವಾಗಿದೆ. ಇಚ್ಛಾಶಕ್ತಿ, ದೃಢ ನಿಶ್ಚಯವು ಮನಸ್ಸು ಅಲೆಯುವುದನ್ನು ತಡೆಯುತ್ತದೆ. ಮನಸ್ಸನ್ನು ನಿಯಂತ್ರಣದಲ್ಲಿಡಲು ಅದೇ ಆಲೋಚನೆಯನ್ನು ಪದೇ ಪದೇ ಅಭ್ಯಾಸಮಾಡಿ. ಮನಸ್ಸನ್ನು ನಿಯಂತ್ರಿಸುವ ಧ್ಯಾನವನ್ನು ದಿನಕ್ಕೆ ಎರಡು ಬಾರಿ ಮಾಡಬೇಕು. ವಿಶೇಷವಾಗಿ ಬೆಳಿಗ್ಗೆ ಮತ್ತು ಸಂಜೆ. ಏಕೆಂದರೆ ಇದು ದಿನದ ಅತ್ಯಂತ ಶಾಂತ ಸಮಯಗಳಾಗಿವೆ. ಏಕಾಗ್ರತೆಯು ಮನುಷ್ಯರನ್ನು ಪ್ರಾಣಿಗಳಿಂದ ಬೇರ್ಪಡಿಸುತ್ತದೆ ಮತ್ತು ಏಕಾಗ್ರತೆಯ ವ್ಯತ್ಯಾಸಗಳಿಂದಾಗಿ ಒಬ್ಬ ಮನುಷ್ಯ ಇನ್ನೊಬ್ಬರಿಂದ ನಿಯಂತ್ರಿಸುವುದು. ಇದು ಒಂದು ದಿನದ ಕೆಲಸವಲ್ಲ. ಆದರೆ ಇದಕ್ಕೆ ನಿಯಮಿತ ಮತ್ತು ವ್ಯವಸ್ಥಿತ ಕೃಷಿ ಅಗತ್ಯ. ನಿಯಂತ್ರಿಸಿದಾಗ ದೇವರನ್ನು ಒಳಗಿನಿಂದ ಸಾಧಿಸಿದಂತೆ ಭಾಸವಾಗುತ್ತದೆ.

ಸ್ವಾಮಿ ವಿವೇಕಾನಂದರ ಪ್ರತಿಯೊಂದು ಸಂದೇಶದಲ್ಲಿಯು ಅದ್ಭುತವಾದ ಶಕ್ತಿಯಿದೆ. ಇಂದಿನ ಯುವಕರು ಅವರ ಸಂದೇಶವನ್ನು ಅರ್ಥಮಾಡಿಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ದೇಶದ ಪ್ರಗತಿಗೆ ಕೊಡಗೆಯನ್ನು ನೀಡಬೇಕು.

– **ವಿನಾಯಕ ಎಂ.ಬಿ.**

ಅಪ್ರೆಂಟಿಸ್, ವಾರ್ತಾ ಮತ್ತು ಸಾ.ಸಂ.ಇಲಾಖೆ–ಗದಗ.


ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ‘ಯುವ ನಿಧಿ’ಗೆ ಸ್ವಾಮಿ ವಿವೇಕಾನಂದರ ಜಯಂತಿ ದಿನದಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಶಿವಮೊಗ್ಗದಲ್ಲಿ ಚಾಲನೆ ನೀಡಲಿದ್ದಾರೆ. ಪದವಿ ಮುಗಿಸಿದ ಯುವಕರಿಗೆ 3 ಸಾವಿರ ರೂ ಹಾಗೂ ಡಿಪ್ಲೋಮಾದವರಿಗೆ 1500 ರೂ ಮಾಸಿಕ ನಿರುದ್ಯೋಗ ಭತ್ಯೆಯನ್ನು ನೀಡಲಾಗುವುದು. ನೋಂದಣಿಗೆ ಅಗತ್ಯ ದಾಖಲಾತಿಗಳೊಂದಿಗೆ ಯುವಜನರು ಆನ್‌ಲೈನ್ ಮುಖಾಂತರ ನೋಂದಾಯಿಸಿ, ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

## ಸ್ವಾಮಿ ವಿವೇಕಾನಂದರ ಜಯಂತಿ ಪ್ರಯುಕ್ತ ವಿಶೇಷ ಲೇಖನ

# ಸ್ಫೂರ್ತಿಯ ಚಿಲುಮೆ ಸ್ವಾಮಿ ವಿವೇಕಾನಂದರು

ನಿಸ್ಸಂದೇಹವಾಗಿ, ಸ್ವಾಮಿ ವಿವೇಕಾನಂದರ ಬೋಧನೆಗಳು ಯುವಕರನ್ನು ಮಾತ್ರವಲ್ಲ ಇಡೀ ಜಗತ್ತನ್ನು ಪ್ರೇರೇಪಿಸಿವೆ ಯುವಜನತೆಗೆ ಕನಸಿನ ಗುರಿಯ ಬೆನ್ನಟ್ಟುವಂತೆ ಕರೆ ನೀಡಿದ ಮಹಾನ್ ಚೇತನ, ಯುವಕರ ಪಾಲಿನ ಸ್ಫೂರ್ತಿಯ ಚಿಲುಮೆ, ಭವ್ಯ ಭಾರತದ ಹೆಮ್ಮೆಯ ಪುತ್ರ, ಸ್ವಾಮಿ ವಿವೇಕಾನಂದರ ಜನ್ಮದಿನ ಇಂದು. ಅವರ ಜನ್ಮದಿನದ ಸವಿನೆನಪಿಗಾಗಿ ಜನವರಿ 12ರಂದು ಭಾರತದಲ್ಲಿ ‘ರಾಷ್ಟ್ರೀಯ ಯುವ ದಿನ’ವನ್ನಾಗಿ ಆಚರಿಸಲಾಗುತ್ತದೆ.

ಸ್ವಾಮಿ ವಿವೇಕಾನಂದರು ಹಲವು ವೈವಿಧ್ಯತೆಗಳೊಂದಿಗೆ ಹೇಗೆ ಬದುಕಬೇಕು ಎಂದು ನಮಗೆ ಕಲಿಸಿದರು. ಪೂರ್ವ ಮತ್ತು ಪಶ್ಚಿಮದ ಸಂಸ್ಕೃತಿಯ ನಡುವೆ ವಾಸ್ತವ ಸೇತುವೆಯನ್ನು ನಿರ್ಮಿಸುವಲ್ಲಿ ಸ್ವಾಮಿ ವಿವೇಕಾನಂದರು ಯುವಕರ ದಾರಿ ದೀಪವಾದರು. ಬಾಲ್ಯದಲ್ಲಿ ನರೇನ್ ಅಥವಾ ನರೇಂದ್ರನಾಥದತ್ತ ಎಂದು ಕರೆಯಲ್ಪಡುತ್ತಿದ್ದ ಸ್ವಾಮಿ ವಿವೇಕಾನಂದರು ಜನವರಿ 12, 1863ರಂದು ವಿಶ್ವನಾಥದತ್ತ ಮತ್ತು ಭುವನೇಶ್ವರಿದೇವಿ ದಂಪತಿಗಳಿಗೆ ಶ್ರೇಷ್ಠ ಕುವರನಾಗಿ ಕಲ್ಕತ್ತಾದಲ್ಲಿ ಜನಿಸಿದರು. ನರೇಂದ್ರನ ತಾತ ದುರ್ಗಾಚರಣದತ್ತರು ಪರ್ಶಿಯನ್ ಮತ್ತು ಸಂಸ್ಕೃತ ಭಾಷೆಗಳಷ್ಟೇ ಅಲ್ಲದೆ ಕಾನೂನಿನಲ್ಲೂ ಪರಿಣತರಾಗಿದ್ದರು.



ಅಂದಿನ ದಿನಗಳಲ್ಲಿ ಪ್ರಪಂಚದಾದ್ಯಂತ ಸಂಚರಿಸುವುದು ಸುಲಭವಿರಲಿಲ್ಲ. ಆದಾಗ್ಯೂ ಸ್ವಾಮಿ ವಿವೇಕಾನಂದರು ಚೈನಾ, ಜಪಾನ್, ಕೆನಡಾ ದೇಶಗಳ ಮೂಲಕ ಅಮೆರಿಕಾಗೆ ಪ್ರಯಾಣ ಬೆಳೆಸಿ, ಚಿಕಾಗೋದಲ್ಲಿ 1893ರ ಸೆಪ್ಟೆಂಬರ್ 11ರಿಂದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಿದ್ದರು.

ಕಿತ್ತಳೆ ಬಣ್ಣದ ನೀಳ ಉಡುಪಿನ, ತೇಜೋಮಯ ಮುಖವುಳ್ಳ ಮಹಿಮಾತಿಶಯನ ಕಡುಸತ್ಯವಾದ ಸರಳ ನುಡಿಗಳ ರುಚಿ ಎಷ್ಟು ಮಹತ್ವದ್ದಾಗಿತ್ತೆಂದರೆ ಸರ್ವಧರ್ಮದ ಸಭೆಯ ಮಹಾನ್ ವ್ಯಕ್ತಿ ಎಂದು ಎಲ್ಲಾ ಪತ್ರಿಕೆಗಳೂ ಅಂದು ವಿವೇಕಾನಂದರನ್ನು ವರ್ಣಿಸಿದ್ದವು. ಭಿಕ್ಷೆಯ ಪಾತ್ರೆ ಹಿಡಿದಿದ್ದ ಓರ್ವ ಸಾಮಾನ್ಯ ಸಂನ್ಯಾಸಿ ಕ್ಷಣಾರ್ಧದಲ್ಲಿ ಶ್ರೇಷ್ಠ ವ್ಯಕ್ತಿ ಎನಿಸಿಕೊಂಡು, ಜಗತ್ಪ್ರಸಿದ್ಧರಾದರು.

ಕೇವಲ ಭಾರತೀಯರಿಗೆ ಮಾತ್ರವಲ್ಲದೇ ಇಡೀ ದೇಶಕ್ಕೆ ಮಹಾನ್ ಚೇತನ ಸ್ಫೂರ್ತಿಯಾಗಿರುವ ವಿವೇಕಾನಂದರ ಜಯಂತಿಯಂದು ಯುವಕರ ಮೇಲೆ ಅಪಾರ ನಂಬಿಕೆ ಹೊಂದಿದ್ದ ಅವರು ‘ನಮಗೆ 100 ಯುವಕರನ್ನು ನೀಡಿದರೆ ನವಭಾರತ ನಿರ್ಮಾಣ ಮಾಡುತ್ತೇನೆ’ ಎಂದಿದ್ದರು. ಯುವಕರ ಬಗ್ಗೆ ಅವರಿಗಿದ್ದ ವಿಶ್ವಾಸದ ಹಿನ್ನಲೆ ಅವರ ಈ ಜಯಂತಿಯನ್ನು ರಾಷ್ಟ್ರೀಯ ಯುವ ದಿನವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಈ ಮೂಲಕ ಅವರ ಚಿಂತನೆಗಳನ್ನು ಯುವ ಪೀಳಿಗೆಗೆ ತಲುಪಿಸುವ ಕಾರ್ಯ ನಡೆಯುತ್ತಿದೆ. ಕೇವಲ ವಿದೇಶಿಯರು ಅಷ್ಟೇ ಅಲ್ಲದೆ ವಿಶ್ವಕ್ಕೆ ಪ್ರೇರಣೆ ನೀಡಿದವರು ವಿವೇಕಾನಂದರು.

ಒಟ್ಟಾರೆಯಾಗಿ ಸ್ವಾಮಿ ವಿವೇಕಾನಂದರು ತಮ್ಮ ಶಕ್ತಿಯುತ ವ್ಯಕ್ತಿತ್ವದ ಮೂಲಕ, ಅಪೂರ್ವ ಪ್ರಚೋದನಾತ್ಮಕ ಬರವಣಿಗೆ ಮೂಲಕ ನಮ್ಮ ರಾಷ್ಟ್ರ ಚೇತನವನ್ನು ಜಾಗೃತಗೊಳಿಸಿ, ಯುವಕರಲ್ಲಿ ನವೋತ್ಸಾಹವನ್ನು ಕೆರಳಿಸಿ, ಅವರಲ್ಲಿ ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆಯನ್ನು ಕುದುರಿಸಿ ಸ್ವತಂತ್ರ ಭವ್ಯ ಭಾರತದ ಕನಸನ್ನು ಕಂಡಿದ್ದ ಸ್ವಾಮಿ ವಿವೇಕಾನಂದರು ಯುವಕರ ವ್ಯಕ್ತಿತ್ವ ವಿಕಸನಕ್ಕೆ ಬುನಾದಿಯನ್ನು ಹಾಕಿದರು.

ಕೊನೆಯದಾಗಿ ಮನುಷ್ಯನಿಗೆ ಆರ್ಥಿಕ ಕನಸಿನ ಬಗ್ಗೆ ಈ ರೀತಿ ಹೇಳಿದ್ದಾರೆ. “ರೂಪಾಯಿಯಿಲ್ಲದೆ ಮನುಷ್ಯ ಬಡವನಲ್ಲ ಆದರೆ ಕನಸು ಮತ್ತು ಮಹತ್ವಾಕಾಂಕ್ಷೆ ಇಲ್ಲದೆ ಮನುಷ್ಯ ನಿಜವಾಗಿಯೂ ಬಡವನಾಗಿದ್ದಾನೆ” ಎಂದು ಸ್ವಾಮಿ ವಿವೇಕಾನಂದರ ಅಂದಿನ ನುಡಿ ಇಂದಿಗೂ ಪ್ರಸ್ತುತ.



– **ಬಸವರಾಜ ಎಮ್. ಯರಗುಪ್ಪಿ.**

ಬಿಆರ್‌ಪಿ,


ಶಿರಹಟ್ಟಿ–ಲಕ್ಷ್ಮೇಶ್ವರ.

## ಪ್ರಗತಿ ಪರಿಶೀಲನಾ ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ. ಮುಂದಿನಮನಿ

# ನಿರ್ಲಕ್ಷ್ಯ ಧೋರಣೆ ಕೈಬಿಡಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಇಲಾಖೆಯ ಎಲ್ಲಾ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವದು ಮುಖ್ಯೋಪಾಧ್ಯಾಯರ ಗುರುತರ ಜವಾಬ್ದಾರಿಯಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ. ಮುಂದಿನಮನಿ ಹೇಳಿದರು.



ಅವರು ಬುಧವಾರ ಪಟ್ಟಣದ ಶ್ರೀ ಉಮಾ ವಿದ್ಯಾಲಯ ಹೈಸ್ಕೂಲ್‌ನಲ್ಲಿ ನಡೆದ ತಾಲೂಕಿನ ಎಲ್ಲಾ ಸರ್ಕಾರಿ ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಪ್ರಧಾನ ಗುರುಗಳಿಂದ ಪ್ರಗತಿ ಪರಿಶೀಲನಾ ಸಭೆಯಲ್ಲಿ ವರದಿಯನ್ನು ಪಡೆದುಕೊಂಡು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಇಲಾಖೆಯು ಅನೇಕ ಕಾರ್ಯಕ್ರಮಗಳನ್ನು ರೂಪಿಸಿ, ಎಲ್ಲ ಮಕ್ಕಳಿಗೂ ಶಿಕ್ಷಣ ದೊರೆಯಬೇಕೆಂಬ ಉದ್ದೇಶವನ್ನು ಹೊಂದಿದೆ. ಆದರೆ ಕೆಲವು ಶಾಲೆಗಳು ಇವುಗಳನ್ನು ನಿರ್ಲಕ್ಷಿಸುವ ಧೋರಣೆ ಕೈಬಿಡಬೇಕು. ಇಲಾಖೆಯ ಯೋಜನೆಗಳು ಸರಿಯಾಗಿ ಅನುಷ್ಠಾನಗೊಳ್ಳದಿದ್ದಲ್ಲಿ ಅದಕ್ಕೆ ಮುಖ್ಯೋಪಾಧ್ಯಾಯರೇ ನೇರ ಹೊಣೆಗಾರರಾಗುತ್ತಾರೆ. ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆಗೆ ಯೋಜನೆಯನ್ನು ತಲುಪಿಸುವ ಪ್ರಾಮಾಣಿಕ ಪ್ರಯತ್ನ ಮಾಡಿ ಎಂದು ಸಲಹೆ ನೀಡಿದರು.

ಕರಾಪ್ರಾಶಾಶಿ ಸಂಘದ ತಾಲೂಕಾಧ್ಯಕ್ಷ ಬಿ.ಎಸ್. ಹರ್ಲಾಪೂರ, ಪ್ರಧಾನ ಕಾರ್ಯದರ್ಶಿ ಚಂದ್ರು ನೇಕಾರ ಮಾತನಾಡಿ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡೋಣ ಮತ್ತು ತಮ್ಮೆಲ್ಲರಿಗೂ ಸಿಗಬೇಕಾದ ಸೌಲಭ್ಯಗಳನ್ನು ತಲುಪಿಸಬೇಕಾದ ಜವಾಬ್ದಾರಿ ನಿಭಾಯಿಸುವದಕ್ಕೆ ಸಂಘದ ಪ್ರತಿಯೊಬ್ಬರೂ ಇಲಾಖೆಯೊಂದಿಗೆ ಸಹಕರಿಸಿ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಎಲ್ಲಾ ವಿದ್ಯಾರ್ಥಿಗಳಿಗೆ ಅವರಿಗೆ ಸಿಗಬೇಕಾದ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ತಲುಪಿಸೋಣ ಎಂದು ಹೇಳಿದರು.

ವಿ.ಡಿ. ಹುಲಬಜಾರ, ಎಲ್.ಎನ್. ನಂದೆಣ್ಣವರ, ಎಮ್.ಎ. ನದಾಫ್, ಎಮ್.ಎಸ್. ಹಿರೇಮಠ, ಹರೀಶ್ ಸೇಂದ್ರಗಯಾ, ಪಿ.ವಿ. ಹಾಲ್ಗುಂಡಿ, ಸಿಆರ್‌ಪಿಗಳಾದ ಸತೀಶ ಬೋಮಲೆ, ಉಮೇಶ ನೇಕಾರ, ಗಿರೀಶ ನೇಕಾರ, ಜ್ಯೋತಿ ಗಾಯಕವಾಡ, ಜಿ.ಆರ್. ಪಾಟೀಲ, ಶಿವಾನಂದ ಆಸುಂಡಿ, ಆರ್.ಎಫ್. ದೊಡ್ಡಮನಿ, ಬಿ.ಎಮ್. ಕುಂಬಾರ ಹಾಗೂ ತಾಲೂಕಿನ ಸರ್ಕಾರಿ ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರು ಹಾಜರಿದ್ದರು.

ಇದೇ ಸಂದರ್ಭದಲ್ಲಿ ವಿಶ್ವ ಹಿಂದಿ ದಿನದ ಅಂಗವಾಗಿ ನಿವೃತ್ತ ಶಿಕ್ಷಕ ಎಸ್.ಎಸ್. ನಾಗಾಲೋಟಿ ಅವರನ್ನು ಗೌರವಿಸಲಾಯಿತು.

## ಯಶಸ್ವಿಯಾಗಿ ಸಂಪನ್ನಗೊಂಡ ‘ರಿಫ್ರೆಶ್ ಯುವರ್ ಮೈಂಡ್’ ವಿಶೇಷ ಶಿಬಿರ

# ಕೋಪ ಬದುಕನ್ನೇ ನಾಶ ಮಾಡುತ್ತದೆ

■ವಿಜಯಸಾಕ್ಷಿ ಸುದ್ದಿ, ಗದಗ

ಕೋಪ, ಒತ್ತಡ, ಮಾನಸಿಕ ಖಿನ್ನತೆಯಿಂದ ವಿದ್ಯಾರ್ಥಿಗಳನ್ನು, ಸಾರ್ವಜನಿಕರನ್ನು ದೂರ ಮಾಡಿ ಪ್ರತಿಯೊಬ್ಬರಲ್ಲಿಯೂ ನೆಮ್ಮದಿಯ ಬದುಕು ರೂಪಿಸುವ ‘ರಿಫ್ರೆಶ್ ಯುವರ್ ಮೈಂಡ್’ ಶಿಬಿರ ಗದಗ ನಗರದಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿತು.



ಗದಗ ಜಿಲ್ಲಾ ಪಾರ್ಶ್ವನಾಥ ಶ್ವೇತಾಂಬರ ಮೂರ್ತಿ ಪೂಜಕ ಸಮಾಜದ ವತಿಯಿಂದ ಕಳೆದ 15 ದಿನಗಳ ಕಾಲ ಗದಗ ನಗರದಲ್ಲಿ ಜರುಗಿದ ವಿಶೇಷ ಶಿಬಿರ, ಸಾವಿರಾರು ವಿದ್ಯಾರ್ಥಿಗಳ ಬದುಕಿನಲ್ಲಿ ಬದಲಾವಣೆಗೆ ಕಾರಣವಾಯಿತು. ತಮ್ಮ ಅತ್ಯುತ್ತಮ ಮಾತುಗಾರಿಕೆಯ ಮೂಲಕ ದೇಶಾದ್ಯಂತ ಹೆಸರಾಗಿರುವ ಆಚಾರ್ಯ ಅಜಿತಶೇಖರಸೂರಿ ಗುರೂಜಿ ಅವರ ನೇತೃತ್ವದ 24 ಜನ ಜೈನ ಮುನಿಗಳ ತಂಡದಿಂದ ಗದಗ ಬೆಟಗೇರಿ ಅವಳಿ ನಗರದ 10ಕ್ಕೂ ಹೆಚ್ಚು ಶಾಲಾ ಕಾಲೇಜುಗಳು, ಪೊಲೀಸ್ ಸಿಬ್ಬಂದಿ ಹೀಗೆ ಒಟ್ಟು 10 ಸಾವಿರಕ್ಕೂ ಹೆಚ್ಚಿನ ಜನರಿಗೆ ಒತ್ತಡ ಮುಕ್ತವಾದ ಬದುಕು ಕಟ್ಟಿಕೊಳ್ಳುವುದು, ಕೋಪ ಮುಕ್ತ ಜೀವನದ ಬಗ್ಗೆ ದೃಷ್ಟಾಂತಗಳು, ಕಥೆಗಳು, ಸಣ್ಣ ಸಣ್ಣ ಚುಟುಕುಗಳ ಮೂಲಕ ತಿಳಿಸಿದರು.

ದೇಶದ ವಿವಿಧ ರಾಜ್ಯಗಳು ಸೇರಿದಂತೆ ಇದುವರೆಗೂ ಒಟ್ಟು 15 ಸಾವಿರಕ್ಕೂ ಅಧಿಕ ಶಿಬಿರಗಳನ್ನು ನಡೆಸಿರುವ ಗುರೂಜಿ ಅವರ ರಿಫ್ರೆಶ್ ಯುವರ್ ಮೈಂಡ್ ಪುಸ್ತಕ ಇದುವರೆಗೂ ಹಿಂದಿ, ಇಂಗ್ಲೀಷ್, ಕನ್ನಡ ಸೇರಿದಂತೆ 8ಕ್ಕೂ ಹೆಚ್ಚು ಭಾಷೆಗಳಲ್ಲಿ ಪ್ರಕಟವಾಗಿದ್ದು, 2 ಲಕ್ಷಕ್ಕೂ ಅಧಿಕ ಪ್ರತಿಗಳು ಮಾರಾಟವಾಗಿವೆ.

ಕೋಪ, ಆಕ್ರೋಶ ಪ್ರತಿಯೊಬ್ಬರ ಬದುಕನ್ನು ನಾಶ ಮಾಡುತ್ತದೆ. ಅದನ್ನೆಲ್ಲಾ ತ್ಯಜಿಸಿ ನೆಮ್ಮದಿಯ ಬದುಕು ರೂಪಿಸಬೇಕು, ಅದರಲ್ಲಿಯೂ ಯುವ ಸಮುದಾಯವನ್ನು ಮಾನಸಿಕವಾಗಿ ಸಧೃಡಗೊಳಿಸಲು ಶಿಬಿರಗಳು ಮತ್ತು ರಿಫ್ರೆಶ್ ಯುವರ್ ಮೈಂಡ್ ಪುಸ್ತಕ ಸಹಕಾರಿಯಾಗಿದೆ. ಶಿಬಿರಕ್ಕೆ ಗದಗ ಜಿಲ್ಲೆಯಲ್ಲಿ ಉತ್ತಮ ಸ್ಪಂದನೆ ದೊರೆತಿದೆ.

**– ಆಚಾರ್ಯ ಅಜಿತಶೇಖರ ಸೂರಿ ಗುರೂಜಿ.**

ಗದಗ ಬೆಟಗೇರಿ ಅವಳಿ ನಗರದ ವಿವಿಧ ಶಾಲಾ ಕಾಲೇಜುಗಳಲ್ಲಿ ಆಚಾರ್ಯ ಅಜಿತಶೇಖರ ಸೂರಿ ಗುರೂಜಿ ಅವರ ಶಿಷ್ಯರು ತರಗತಿಗಳನ್ನು ನಡೆಸಿಕೊಟ್ಟರೆ, ಪ್ರತಿ ದಿನ ಬೆಳಗ್ಗೆ 7ರಿಂದ 9ರವರೆಗೆ ಸ್ವತಃ ಗುರೂಜಿಯವರೇ ಪ್ರವಚನ ನೀಡುವ ಮೂಲಕ ಜನರಲ್ಲಿ ಉಂಟಾಗುತ್ತಿದ್ದ ಅಂತರ, ಗೊಂದಲ, ಆಕ್ರೋಶ, ಕೊಪಗಳನ್ನು ದೂರ ಮಾಡಿದರು.

ಪ್ರತಿಯೊಂದು ಶಿಬಿರಗಳಲ್ಲಿಯೂ ಅವರ ಪುಸ್ತಕಗಳನ್ನು ಆಧಾರವಾಗಿಟ್ಟುಕೊಂಡು ಅವರ ಶಿಷ್ಯ ವೃಂದ ವಿದ್ಯಾರ್ಥಿಗಳಿಗೆ ವಿಶೇಷ ತಿಳವಳಿಕೆ ನೀಡುವುದು, ಅವರನ್ನು ಜಾಗೃತಗೊಳಿಸುವುದು ಕೋಪ ಮುಕ್ತ ನೆಮ್ಮದಿಯ ಸಮಾಜ ನಿರ್ಮಿಸುವುದಕ್ಕಾಗಿ ಶ್ರಮಿಸುತ್ತಿದ್ದಾರೆ.

# ಅಯೋಧ್ಯೆ ಆಮಂತ್ರಣ, ಮಂತ್ರಾಕ್ಷತೆ ವಿತರಣೆ ಇಂದು



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಅಯೋಧ್ಯೆಯಲ್ಲಿ ಜ.22ರಂದು ಲೋಕಾರ್ಪಣೆ ಗೊಳ್ಳಲಿರುವ ಶ್ರೀ ರಾಮನ ದೇವಸ್ಥಾನದ ವತಿಯಿಂದ ಪಟ್ಟಣಕ್ಕೆ ಬಂದಿರುವ ಆಮಂತ್ರಣ ಪತ್ರಿಕೆ ಮತ್ತು ಫಲ ಮಂತ್ರಾಕ್ಷತೆಗಳನ್ನು ಜ.12ರ ಸಂಜೆ 6ಕ್ಕೆ ವಿತರಣೆ ಮಾಡಲಾಗುವುದೆಂದು ಜಗದೀಶ ಸಂಕನಗೌಡ್ರ ತಿಳಿಸಿದರು.

ಪಟ್ಟಣದ ಸಂತೆ ಬಜಾರದಲ್ಲಿರುವ ಶ್ರೀ ಹನುಮಾನ ಮಂದಿರದಲ್ಲಿ ಈ ಕುರಿತು ವಿವರಗಳನ್ನು ನೀಡಲು ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಶುಕ್ರವಾರ ಸಂಜೆ 6ಕ್ಕೆ ಇಲ್ಲಿನ ಹಿರೇಮಠದ ಸಭಾಭವನದಲ್ಲಿ ಈ ಕುರಿತು ವಿಶೇಷ ಸಭೆಯನ್ನು ಆಯೋಜನೆ ಮಾಡಲಾಗಿದ್ದು, ರೋಣದ ಬೂದೀಶ್ವರ ಮಠದ ಶ್ರೀ ವಿಶ್ವನಾಥ ಸ್ವಾಮೀಜಿ ನೇತೃತ್ವದಲ್ಲಿ ಆಮಂತ್ರಣ ಪತ್ರಿಕೆ ಮತ್ತು ಮಂತ್ರಾಕ್ಷತೆ ವಿತರಣಾ ಸಮಾರಂಭ ಜರುಗಲಿದೆ. ಉಪನ್ಯಾಸಕ ಮಾರುತಿ ಕಟ್ಟಿಮನಿ ವಿಶೇಷ ವಕ್ತಾರರಾಗಿ ಆಗಮಿಸಲಿದ್ದು, ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರ ನಿರ್ಮಾಣದ ಬಗೆಗಿನ ವಿವಿಧ ಮಜಲುಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ಡಾ. ಆರ್.ಕೆ. ಗಚ್ಚಿನಮಠ ವಹಿಸಲಿದ್ದಾರೆ ಎಂದರು.

ಮಂಜುನಾಥ ಹೆಗಡೆ ಮಾತನಾಡಿ, ಜ. 22ರಂದು ನಮ್ಮೆಲ್ಲರ ಕನಸಿನ ಶ್ರೀ ರಾಮ ಮಂದಿರ ಅಯೋಧ್ಯೆಯಲ್ಲಿ ಸಾಕಾರಗೊಳ್ಳಲಿದೆ. ಅಂದು ಬೆಳಿಗ್ಗೆ ನರೇಗಲ್ಲದ ಶ್ರೀ ರಾಮ ಮಂದಿರದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗುತ್ತಿದ್ದು, ಎಲ್ಲರೂ ತಮ್ಮ ತಮ್ಮ ಓಣಿಗಳಲ್ಲಿನ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನೆರವೇರಿಸಬೇಕು. ಅಂದು ಸಂಜೆ ಪ್ರತೀ ಮನೆಯಂಗಳದಲ್ಲೂ ದೀಪಗಳನ್ನು ಬೆಳಗಬೇಕೆಂದರು.

ಗಣ್ಯ ವರ್ತಕ ಮುತ್ತಣ್ಣ ಪಲ್ಲೇದ ಆಚರಣೆಯ ಬಗ್ಗೆ ಸಲಹೆ-ಸೂಚನೆಗಳನ್ನು ನೀಡಿದರು. ಆನಂದ ಕುಲಕರ್ಣಿ ನಿರೂಪಿಸಿ, ವಂದಿಸಿದರು.

**ವಿಜಯ ಲಲಿತಕಲಾ ಕಾಲೇಜಿನ ವಾರ್ಷಿಕ ಕ್ರೀಡಾಕೂಟದಲ್ಲಿ ಯೋಧ ಅಶೋಕ ಹುಲ್ಲೂರ ಅಭಿಮತ**

# ಕ್ರೀಡೆಯಿಂದ ದೇಹ, ಮನಸ್ಸು ಸದೃಢ



■ವಿಜಯಸಾಕ್ಷಿ ಸುದ್ದಿ, ಗದಗ

ಕ್ರೀಡೆಯಿಂದ ಸದಾ ಕ್ರಿಯಾಶೀಲತೆ ಮತ್ತು ಸದೃಢತೆ ಬೆಳೆಯಲು ಸಾಧ್ಯವಾಗುತ್ತದೆ. ಕ್ರೀಡಾ ಮೀಸಲಾತಿಯಡಿ ಹಲವಾರು ಅವಕಾಶಗಳನ್ನು ಪಡೆದುಕೊಳ್ಳಬಹುದು. ವಿದ್ಯಾರ್ಥಿ ದೆಸೆಯಿಂದ ಕ್ರೀಡೆಗಳಿಗೂ ಸಮನಾದ ಅವಕಾಶವನ್ನು ನೀಡಬೇಕು. ಇದರಿಂದ ದೇಹ ಮತ್ತು ಮನಸ್ಸು ಸದೃಢವಾಗುತ್ತದೆ ಎಂದು ಯೋಧ ಅಶೋಕ ಹುಲ್ಲೂರ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿನ ವಿಜಯ ಲಲಿತಕಲಾ ಸಂಸ್ಥೆಯ ವಿಜಯ ಲಲಿತಕಲಾ ಕಾಲೇಜು ಹಾಗೂ ವಿಜಯ ಪದವಿಪೂರ್ವ ಕಾಲೇಜುಗಳ ಸಹಯೋಗದಲ್ಲಿ, ಕ್ರೀಡಾ ಕ್ಲಬ್ ನೇತೃತ್ವದಲ್ಲಿ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯನ ದೇಹದಲ್ಲಿ ಉತ್ಪತ್ತಿಯಾಗುವ ವಿಷವನ್ನು ಬೆವರಿನ ಮೂಲಕ ಹೊರಹಾಕುವದರಿಂದ ನಮ್ಮ ದೇಹದಲ್ಲಿರುವ ಕೊಬ್ಬಿನ ಅಂಶ ಹೊರ ಹೋಗುತ್ತದೆ. ಅದರಂತೆ ವಿದ್ಯಾರ್ಥಿಗಳು ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಿಗೆ ಪ್ರಾಮುಖ್ಯತೆ ನೀಡುವುದರಿಂದ ಆರೋಗ್ಯಪೂರ್ಣ ಸಮಾಜ ನಿರ್ಮಾಣವಾಗುತ್ತದೆ. ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಬೌದ್ಧಿಕ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವುದರೊಂದಿಗೆ ದೈಹಿಕ ಸಾಮರ್ಥ್ಯಕ್ಕೆ ಮಹತ್ವ ನೀಡಬೇಕು. ವಿಜಯ ಲಲಿತಕಲಾ ಕಾಲೇಜು ನಿಮ್ಮ ಸರ್ವಾಂಗೀಣ ವಿಕಾಸಕ್ಕಾಗಿ ಕ್ರೀಡಾಕೂಟವನ್ನು ನಡೆಸುತ್ತಿದೆ. ಇದರಲ್ಲಿ ಎಲ್ಲರೂ ಭಾಗಿಯಾಗಿ ಸೋಲು-ಗೆಲುವನ್ನು ಸಮನಾಗಿ ಸ್ವೀಕರಿಸಿ, ಸಾಧಕರಾಗಿ ಎಂದರು.

ಡೋಣಿ ಗ್ರಾ.ಪಂ ಮಾಜಿ ಅಧ್ಯಕ್ಷ ನಿಂಗನಗೌಡ ಹರ್ತಿ ಮಾತನಾಡಿ, ಬೆಳೆಯುತ್ತಿರುವ ಪ್ರತಿಭೆಗಳಾದ ನೀವು ಸದಾ ಸದೃಢವಾಗಿರಲು ನಿತ್ಯ ಆಟ-ಪಾಠದಲ್ಲಿ ನಿರತರಾಗಬೇಕು. ಕ್ರೀಡೆಗಳಲ್ಲಿ ಒಂದು ದಿನ ಮಾತ್ರ ಭಾಗವಹಿಸುವದಲ್ಲ. ನಿರಂತರವಾಗಿ ಪಾಲ್ಗೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವೇದಿಕೆಯ ಮೇಲೆ ಕಾಲೇಜಿನ ಪ್ರಾಚಾರ್ಯ ಡಾ. ಸಿ.ವಿ. ಬಡಿಗೇರ, ಉಪನ್ಯಾಸಕಿ ಶೃತಿ ಪಾಟೀಲ, ವಿದ್ಯಾರ್ಥಿ ಪ್ರತಿನಿಧಿಗಳಾದ ದಿವ್ಯಾನಂದ, ಸಂಗಪ್ಪ ಉಪಸ್ಥಿತರಿದ್ದರು. ಪ್ರೊ. ಬಸವರಾಜ ನೆಲಜೇರಿ ನಿರೂಪಿಸಿ ವಂದಿಸಿದರು. ಪ್ರೊ. ಎಸ್ ವಿ ಗುಂಜಾಳ, ಶೂಭೋದ ಕಾಮತ್, ಪ್ರೊ. ಬಿ.ಸಿ. ಕುತ್ನಿ, ವಿಶಾಲಾಕ್ಷಿ ಮೂಲಿಮನಿ, ವಿದ್ಯಾರ್ಥಿಗಳಾದ ವೀರೇಶ ವಡ್ಡಟ್ಟಿ, ರಂಗನಾಥ, ವಿವೇಕ, ಕೌಶಿಕ, ತೇಜಲ್ ಪಟೇಲ್, ವಿದ್ಯಾ ಮೇರವಾಡೆ, ರಾಜೇಶ್ವರಿ, ದೀಪಾ ಬಸಮ್ಮ ಮುಂತಾದವರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು.

> ಸಂಸ್ಥೆಯ ಕಾರ್ಯದರ್ಶಿ ಪ್ರೊ. ಸಂತೋಷ ಅಕ್ಕಿ ಮಾತನಾಡಿ, ವಿದ್ಯಾಥಿಗಳ ಸರ್ವತೋಮುಖ ಬೆಳವಣಿಗೆ ಮತ್ತು ನಾಯಕತ್ವ ಮನೋಭಾವ ಬೆಳೆಸಲು ವಿವಿಧ ಸೆಲ್, ಕ್ಲಬ್, ಅಸೋಸಿಯೇಷನ್ ಆರಂಭಿಸಲಾಗಿದೆ. ಈ ಕಾರ್ಯಕ್ರಮಗಳ ಮೂಲಕ ಶಿಸ್ತು, ಪದ್ಧತಿಯನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳು ಆದರ್ಶ ವ್ಯಕ್ತಿತ್ವ ರೂಢಿಸಿಕೊಳ್ಳಬೇಕು ಎಂದರು.

# ಜೈನ ಮುನಿಗಳಿಗೆ ಅಯೋಧ್ಯಾ ಆಮಂತ್ರಣ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಅಯೋಧ್ಯೆಯಲ್ಲಿ ಜ.22ರಂದು ಲೋಕಾರ್ಪಣೆಗೊಳ್ಳಲಿರುವ ರಾಮ ಮಂದಿರದ ಆಮಂತ್ರಣ ಪತ್ರಿಕೆ ಮತ್ತು ಅಕ್ಷತೆಯನ್ನು ಗದಗ ಜಿಲ್ಲಾ ವಿಶ್ವ ಹಿಂದೂ ಪರಿಷತ್‌ನ ಅಧ್ಯಕ್ಷ ಶ್ರೀಧರ ಕುಲಕರ್ಣಿ, ಉಪಾಧ್ಯಕ್ಷ ವೀರಣ್ಣ ಹೇಮಾದ್ರಿ, ಮಾರುತಿ ಪವಾರ ಮುಂತಾದ ಮುಖಂಡರು ಸೇರಿ ಗದಗ ಜೈನ ಜೈನ ಮಂದಿರದ ಮುನಿ ಆಚಾರ್ಯಅಜಿತ್ ಶೇಖರ ಸುರೇಶ್ವರ ಆಚಾರ್ಯರಿಗೆ ಸಮರ್ಪಿಸಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಜೈನ ಮುನಿಗಳು, ಧರ್ಮ ರಕ್ಷಣೆಗೆ ಎಲ್ಲರೂ ಮುಂದಾಗಬೇಕು. ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರದ ನಿರ್ಮಾಣ ಕೋಟ್ಯಂತರ ಭಾರತೀಯರ ಕನಸಾಗಿತ್ತು. ಅದು ಇಂದು ನನಸಾಗುತ್ತಿರುವುದು ಸಂತಸದ ವಿಷಯ. ಕಾರ್ಯಕ್ರಮವು ವಿಜೃಂಭಣೆಯಿಂದ, ಅಚ್ಚುಕಟ್ಟಾಗಿ ನಡೆಯಲಿ ಎಂದು ಶುಭ ಕೋರಿದರು.

ಪ್ರವೀಣ ಬನ್ಸಾಲಿ ಮಾತನಾಡಿ, ಅಯೋಧ್ಯಾ ರಾಮ ಮಂದಿರ ನಿರ್ಮಾಣ ನಮ್ಮೆಲ್ಲರ ಕನಸಾಗಿತ್ತು. ಇದಕ್ಕಾಗಿ ಅನೇಕ ಹೋರಾಟಗಳು ನಡೆದಿವೆ. ಇದಕ್ಕಾಗಿ ಕರಸೇವೆ ನಡೆದಾಗ ನಮ್ಮ ಸಮಾಜದ ಅನೇಕ ಯುವಕರು ಪಾಲ್ಗೊಂಡಿದ್ದರು ಎಂದು ಅಂದಿನ ಘಟನೆಯನ್ನು ನೆನಪಿಸಿಕೊಂಡರು.

ಈ ಸಂದರ್ಭದಲ್ಲಿ ಜೈನ ಸಮಾಜದ ಮುಖಂಡರಾದ ಕಾಂತಿಲಾಲ ಬನ್ಸಾಲಿ, ಹರೀಶ ಶಾ, ದಿಲೀಪ ಓಸ್ವಾಲ್, ಜವಾಹರಲಾಲ ಬಂದಾ, ನಿರ್ಮಲ ಪಾರೇಖ, ಮದನಲಾಲ ಬನ್ಸಾಲಿ, ಸಮಾಜದ ಅನೇಕ ಪ್ರಮುಖರು, ಮಾತೆಯರು ಉಪಸ್ಥಿತರಿದ್ದರು ಎಂದು ಶ್ರೀಧರ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಕ್ಷರ ದಾಸೋಹ ಕಾರ್ಯ ಶ್ಲಾಘನೀಯ



■ವಿಜಯಸಾಕ್ಷಿ ಸುದ್ದಿ, ಗದಗ

ಶಾಲಾ ಮಕ್ಕಳಿಗೆ ಪ್ರತಿನಿತ್ಯ ಶುಚಿ-ರುಚಿಯಾದ ಬಿಸಿಯೂಟ ನೀಡುವಲ್ಲಿ ಅಕ್ಷರ ದಾಸೋಹ ಕಾರ್ಯಕರ್ತರ ಸೇವೆ ಶ್ಲಾಘನೀಯವಾಗಿದೆ ಎಂದು ಗದಗ- ಬೆಟಗೇರಿ ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷೆ ರಜನಿ ಪಾಟೀಲ ಹೇಳಿದರು.

ಅವರು ನಗರದ ಸರಕಾರಿ ಪ್ರಾಮಿಕ ಶಾಲೆ ನಂ.2ರಲ್ಲಿ ಇನ್ನರ್‌ವ್ಹೀಲ್ ಕ್ಲಬ್ ವತಿಯಿಂದ ಬಿಸಿಯೂಟ ತಯಾರಕರಿಗೆ ಸೀರೆಗಳನ್ನು ವಿತರಿಸಿ ಮಾತನಾಡಿದರು. ಮಕ್ಕಳು ಪ್ರತಿದಿನ ಶಾಲೆಯಲ್ಲಿ ಬಿಸಿಯೂಟ ಸೇವಿಸುವುದರಿಂದ ಅಪೌಷ್ಟಿಕತೆ ನಿವಾರಣೆಯಾಗುತ್ತದೆ. ಸಹಭೋಜನದಿಂದ ಸರ್ವರಲ್ಲೂ ಸಮಾನತೆ ಉಂಟಾಗುತ್ತದೆ ಎಂದರು. ಕ್ಲಬ್‌ನ ಕಾರ್ಯದರ್ಶಿ ಹೇಮಾ ಪೊಂಗಾಲಿಯಾ ಮಾತನಾಡಿ ಇನ್ನರವ್ಹೀಲ್ ಕ್ಲಬ್ ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಶ್ರಮವಹಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಸ್. ಬುರಡಿ ಮಾತನಾಡಿ, ಬಿಸಿಯೂಟದ ಸಿಬ್ಬಂದಿಗಳು ಅಚ್ಚುಕಟ್ಟಾಗಿ ಅಡುಗೆ ಸಿದ್ಧಪಡಿಸಿ ಮಕ್ಕಳಿಗೆ ಉಣಬಡಿಸುತ್ತಿದ್ದು, ಅವರ ಕಾರ್ಯ ಮೆಚ್ಚುವಂತದ್ದು ಎಂದರು. ಕಾರ್ಯಕ್ರಮದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು, ಕ್ಲಬ್‌ನ ಸದಸ್ಯೆಯರು ಉಪಸ್ಥಿತರಿದ್ದರು. ಕಾರ್ಯದರ್ಶಿ ಹೇಮಾ ಪೊಂಗಾಲಿಯಾ ಸ್ವಾಗತಿಸಿದರು. ವಿದ್ಯಾ ಗಂಜಿಹಾಳ ನಿರೂಪಿಸಿದರು. ಶುಭಾ ಕುಂದಗೋಳ ವಂದಿಸಿದರು.

**ಎಸ್‌ಎಸ್‌ಕೆ ಪಂಚ ಟ್ರಸ್ಟ್ ಕಮಿಟಿಯಿಂದ ವಿಶ್ವ ಕಲ್ಯಾಣಾರ್ಥವಾಗಿ ದೇವತಾ ಕಾರ್ಯಕ್ರಮ**

# ಶ್ರೀಚಕ್ರ ಸಾಂಗತಾ ಯಜ್ಞ ಜ.18, 19ಕ್ಕೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕಳೆದ 18 ತಿಂಗಳ ಹಿಂದೆ ಜೀರ್ಣೋದ್ಧಾರಗೊಂಡು ಉದ್ಘಾಟನೆ ಗೊಂಡಿರುವ ಪಟ್ಟಣದ ಶ್ರೀ ಅಂಬಾಭವಾನಿ ದೇವಸ್ಥಾನದಲ್ಲಿ ಶ್ರೀಚಕ್ರ ಕುಂಕುಮಾರ್ಚನೆಯ ಸಹಸ್ರನಾಮ ಸಾಂಗತಾ ಯಜ್ಞ ಕಾರ್ಯಕ್ರಮವನ್ನು ಜ.18, 19ರಂದು ನೆರವೇರಿಸಲು ನಿರ್ಧರಿಸಿದ್ದು, ಇದೊಂದು ಅಭೂತಪೂರ್ವ ಕಾರ್ಯಕ್ರಮವಾಗಿದೆ. ವಿಶ್ವ ಕಲ್ಯಾಣಾರ್ಥವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಎಸ್‌ಎಸ್‌ಕೆ ಸಮಾಜದ ಪಂಚಟ್ರಸ್ಟ್ ಕಮಿಟಿ ಉಪಾಧ್ಯಕ್ಷ ನಾರಾಯಣಸಾ ಪವಾರ ಹೇಳಿದರು.

ಅವರು ಈ ಕುರಿತು ದೇವಸ್ಥಾನದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ, ದೇವಸ್ಥಾನವು ಜೀರ್ಣೋದ್ಧಾರ ಗೊಂಡ ಮೇಲೆ ಸಾಕಷ್ಟು



ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಜಾಗೃತ ದೇವಿಯಾಗಿರುವ ಅಂಬಾಭವಾನಿ ದೇವರಿಗೆ ಭಕ್ತರ ಸಂಖ್ಯೆಯು ಅಧಿಕಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ವೇ.ಮೂ. ಬಾಲಚಂದ್ರಭಟ್ ಹುಲಮನಿ ಅವರ ಸಾರಥ್ಯದಲ್ಲಿ ಕಳೆದ 14 ತಿಂಗಳಿಂದ ಎಲ್ಲ ಸಮಾಜಗಳ ನೂರಾರು ಸುಮಂಗಲಿಯರಿಂದ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಶ್ರೀಚಕ್ರ ಕುಂಕುಮಾರ್ಚನೆಯನ್ನು ಕೈಗೊಂಡಿದ್ದು, ಶ್ರೀ ದೇವಿಯ ಅನುಗ್ರಹದಿಂದ ಸುಮಾರು 36 ಲಕ್ಷ ಲಲಿತಾ ಸಹಸ್ರನಾಮಾವಳಿ ಕುಂಕುಮಾರ್ಚನೆಯನ್ನು ದೇವಿಯ ಪಾದಕ್ಕೆ ಅರ್ಪಿಸುವ ಸಾಂಗತಾ ಯಜ್ಞವನ್ನು ನಡೆಸಲಾಗುವದು ಎಂದು ಹೇಳಿದರು.

ಜ.18ರಂದು ಮುಂಜಾನೆ 7 ಗಂಟೆಯಿಂದ ವೇ.ಮೂ. ಬಾಲಚಂದ್ರಭಟ್ ಹುಲಮನಿ ಹಾಗೂ ಅನೇಕ ಋತ್ವಿಜರ ಪೌರೋಹಿತ್ಯದಲ್ಲಿ ಶ್ರೀ ಅಂಬಾಭವಾನಿ ಮೂರ್ತಿಗೆ ಅಭಿಷೇಕ, ಅಲಂಕಾರ, ಮಂಗಳಾರತಿ ಜರುಗಲಿದೆ. ನಂತರ ಶ್ರೀ ಚಂಡಿಕಾ ಹೋಮ, ಶುಕ್ರವಾರ ಬೆಳಿಗ್ಗೆ ವಿಶೇಷ ಪೂಜೆ ಅಲಂಕಾರಗಳು ನಂತರ ಮುಂಜಾನೆ 8 ಗಂಟೆಯಿಂದ ಶ್ರೀಚಕ್ರ ಹವನ, ಶ್ರೀ ಲಲಿತಾ ಸಹಸ್ರನಾಮ ಹವನ ಪೂರ್ಣಾಹುತಿ ಜರುಗುವದು. ನಂತರ ಕುಂಕುಮಾರ್ಚನೆ ಪೂಜೆಯಲ್ಲಿ ನಿರಂತರವಾಗಿ ಪಾಲ್ಗೊಂಡ ಸುಮಂಗಲಿಯರಿಗೆ ಶ್ರೀ ಚಕ್ರ ವಿತರಣೆ ಜರುಗಲಿದೆ ಎಂದರು.

ಜ.22ರಂದು ಅಯೋಧ್ಯೆಯಲ್ಲಿ ಜರುಗುವ ರಾಮಮಂದಿರ ಉದ್ಘಾಟನೆಯ ನಿಮಿತ್ತ ವಿಶೇಷ ಪೂಜೆಯನ್ನು ಸಹ ನಡೆಸಲಾಗುವದು. ಈ ವಿಶೇಷ ಕಾರ್ಯಕ್ರಮದಲ್ಲಿ ಎಲ್ಲ ಸಮಾಜದ ಸಾರ್ವಜನಿಕರು, ಭಕ್ತರು ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಲಕ್ಷ್ಮಣಸಾ ರಾಜೋಳಿ, ತುಕಾರಾಮಸಾ ಬದಿ, ಆನಂದಸಾ ಬದಿ, ಯಲ್ಲಪ್ಪ ಬದಿ, ತಿಪ್ಪಣ್ಣಸಾ ಬದಿ, ಛಾಯಾಸಾ ಬದಿ, ಗಣಪತಸಾ ಪೂಜಾರಿ, ತರುಣ ಸಂಘದ ಅಧ್ಯಕ್ಷ ಭರತ ಬಾಕಳೆ, ಕಿರಣ ಬದಿ, ಮಂಜುನಾಥ ಬದಿ, ಗಣೇಶ ಬದಿ, ಮನೋಹರಸಾ ಬಸವಾ, ವಿನಾಯಕ ರಾಜೋಳಿ, ಛಾಂಡಗೆ ಸೇರಿದಂತೆ ಅನೇಕರು ಹಾಜರಿದ್ದರು.

> ವಿಠ್ಠಲಸಾ ಶಿದ್ಲಿಂಗ್ ಹೇಳಿಕೆ ನೀಡಿ, ಲೋಕಕಲ್ಯಾಣಾರ್ಥವಾಗಿ ನಡೆಯುವ ಈ ಕುಂಕುಮಾರ್ಚನೆ ಸಾಂಗತಾ ಯಜ್ಞದಲ್ಲಿ ಸಾವಿರಾರು ಜನರು ಸೇರುವ ನಿರೀಕ್ಷೆ ಇದ್ದು, ಅದಕ್ಕಾಗಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಸಮಾಜದ ತರುಣ ಸಂಘ, ಮಹಿಳಾ ಸಂಘ, ಪಂಚಟ್ರಸ್ಟ ಕಮಿಟಿಯವರು ಎಲ್ಲ ವ್ಯವಸ್ಥೆಗಳನ್ನ ಅಚ್ಚುಕಟ್ಟಾಗಿ ನೋಡಿಕೊಳ್ಳಲಿದ್ದಾರೆ. ಎಲ್ಲ ಸಮಾಜಗಳಿಂದಲೂ ಈ ಕಾರ್ಯಕ್ರಮಕ್ಕೆ ಸ್ವಯಂಪ್ರೇರಣೆಯಿಂದ ಸೇವೆ ಮಾಡಲು ಮುಂದಾಗಿದ್ದಾರೆ ಎಂದು ಹೇಳಿದರು.

**ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ತಾಲೂಕು ಮಟ್ಟದ 'ವಿವೇಕ ಟ್ರೋಫಿ-2024'**

# ಉತ್ತಮ ಶಿಕ್ಷಣದಿಂದ ಸಮಾಜದಲ್ಲಿ ಗೌರವ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸ್ವಾಮಿ ವಿವೇಕಾನಂದರು ಯುವ ಶಕ್ತಿಗೆ ಸದಾ ಪ್ರೇರಣೆಯಾಗಿದ್ದಾರೆ. ಅವರ ಹೆಸರೇ ರೋಮಾಂಚನ, ದೇಶಭಕ್ತಿ ನೀಡುವಂತೆ ಮಾಡುತ್ತದೆ. ಅದಕ್ಕಾಗಿ ವಿವೇಕಾನಂದರ ಜೀವನ ಚರಿತ್ರೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವದು ಇಂದಿನ ದಿನಗಳಲ್ಲಿ ಅತ್ಯವಶ್ಯವಾಗಿದೆ ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಜಿಲ್ಲಾ ಪ್ರಮುಖ ಡಾ.ಪುನೀತ್ ಬೆನಕವಾರಿ ಹೇಳಿದರು.

ಅವರು ಪಟ್ಟಣದ ಬಿಸಿಎನ್ ವಿದ್ಯಾಸಂಸ್ಥೆಯ ಬಿಸಿಎನ್ ಸಿರಿ ಪ.ಪೂ ಮತ್ತು ಪದವಿ ಕಾಲೇಜು ಆವರಣದಲ್ಲಿ ಮಂಗಳವಾರ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ ಶಾಖೆ



ವತಿಯಿಂದ ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ತಾಲೂಕು ಮಟ್ಟದ 'ವಿವೇಕ ಟ್ರೋಫಿ-2024' ವಾಲಿಬಾಲ್ ಮತ್ತು ಥ್ರೋಬಾಲ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿ ಜೀವನ ಎನ್ನುವದು ಒಂದು ಮಹತ್ವವಾದ ಘಟ್ಟವಾಗಿದೆ. ಇಲ್ಲಿ ಉತ್ತಮ ದಾರಿಯಲ್ಲಿ ಸಾಗದಿದ್ದಲ್ಲಿ ಮುಂದಿನ ದಾರಿ ಕಠಿಣವಾಗುತ್ತದೆ ಎನ್ನುವ ಅರಿವು ವಿದ್ಯಾರ್ಥಿಗಳಲ್ಲಿರಬೇಕು. ಉತ್ತಮ ಶಿಕ್ಷಣ ಸಮಾಜದಲ್ಲಿ ಉತ್ತಮ ಗೌರವವನ್ನು ತಂದುಕೊಡುತ್ತದೆ. ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗುವ ನಿಟ್ಟಿನಲ್ಲಿ ಚಿಂತನೆ ಮಾಡಬೇಕು. ಸಮಾಜಕ್ಕೆ ನಾವು ನೀಡುವದನ್ನೇ ಸಮಾಜ ನಮಗೆ ನೀಡುತ್ತದೆ ಎಂದು ಅರಿತುಕೊಳ್ಳಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ವಿವೇಕಾನಂದರ ಆದರ್ಶಗಳನ್ನು ಮೈಗೂಡಿಸಿಕೊಂಡು ಆದರ್ಶ ವ್ಯಕ್ತಿಗಳಾಗಿ ಬೆಳೆಯಬೇಕೆಂದು ಕರೆನೀಡಿದರು.

ಪತ್ರಕರ್ತ ದಿಗಂಬರ ಪೂಜಾರ ಮಾತನಾಡಿದರು. ಬಿಸಿಎನ್ ವಿದ್ಯಾಸಂಸ್ಥೆಯ ಅಧ್ಯಕ್ಷ ಲೋಹಿತ್ ನೆಲವಿಗಿ ಟೂರ್ನಿಗೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ದರ್ಶನ್ ಅಕ್ಕಿ, ಚೇತನ ಯಲಿಗಾರ, ಶರಣಪ್ಪ ಶಿವನಗೌಡ್ರ, ಚಂದ್ರು ಕುಂದಗೋಳ, ಪ್ರದೀಪ ಶೆಟ್ಟರ, ವಿನಯ ಉಮಚಗಿ, ಸಾಗರ ಮೆಹರವಾಡೆ, ಅರುಣ್ ಕಳ್ಳಿಹಾಳ, ಪ್ರಜ್ವಲ್ ವಾಲಿಕಾರ್ ಮುಂತಾದವರಿದ್ದರು. ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕುಗಳ ಸುಮಾರು 15 ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

> ಜಿಲ್ಲಾ ಸಂಚಾಲಕ ಪರ್ವತಗೌಡ ಕಲ್ಲನಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಎಬಿವಿಪಿ 1948ರಲ್ಲಿ ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳ ಸಮಸ್ಯೆಗಳ ಹೋರಾಟಕ್ಕೆ ಮುಂಚೂಣಿಯಲ್ಲಿ ನಿಂತು ಕಾರ್ಯ ಮಾಡುತ್ತಿದೆ. ಪಂದ್ಯಾಟಗಳಲ್ಲಿ ಸೋಲು-ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಿ ಪಂದ್ಯಾವಳಿ ಯಶಸ್ವಿಗೊಳಿಸಿ ಎಂದರು.

**ಸೃಷ್ಟಿ ದಶಮಾನೋತ್ಸವ ಸಂಭ್ರಮ । ವಿವಿಧ ಕಲಾವಿದರಿಂದ ಕಲಾಪ್ರದರ್ಶನ**

# ಧನಾತ್ಮಕ ಚಿಂತನೆಯಿಂದ ಉಜ್ವಲ ಭವಿಷ್ಯ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ದೇಶದ ಭವಿಷ್ಯ ಶಾಲಾ ಕೊಠಡಿಯಲ್ಲಿ ನಿರ್ಮಾಣವಾಗುತ್ತದೆ. ಧನಾತ್ಮಕ ಚಿಂತನೆಯಿಂದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗುತ್ತದೆ ಎಂದು ಬೆಳಗಾವಿಯ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲದ ಜಂಟಿ ನಿರ್ದೇಶಕ ಶಂಕರಾನಂದ ಬನಶಂಕರಿ ಹೇಳಿದರು.

ಇಲ್ಲಿನ ಸೃಜನಾ ಎಜ್ಯುಕೇಶನ್ ಟ್ರಸ್ಟ್‌ನ ಸೃಷ್ಟಿ ಪದವಿಪೂರ್ವ ಮಹಾವಿದ್ಯಾಲಯದ 10ನೇ ವರ್ಷದ ಅಂಗವಾಗಿ 2023-24ನೇ ಸಾಲಿನ ದ್ವಿತೀಯ ಪಿಯುಸಿ ವಿಜ್ಞಾನ ವಿದ್ಯಾರ್ಥಿಗಳ ಬೀಳ್ಕೊಡುಗೆ ಮತ್ತು ಸಹಪಠ್ಯ



ಚಟುವಟಿಕೆಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ರವಿ ಕ್ಯಾಮಣ್ಣವರ ಮಾತನಾಡಿ, ಸೃಷ್ಟಿ ಮಹಾವಿದ್ಯಾಲಯವು ಗುರುಕುಲ ಮಾದರಿಯಲ್ಲಿ ಶಿಕ್ಷಣ ನೀಡುತ್ತಾ ಬಂದಿದೆ. 28 ವಿದ್ಯಾರ್ಥಿಗಳಿಂದ ಪ್ರಾರಂಭವಾಗಿ ಈಗ 313 ವಿದ್ಯಾರ್ಥಿಗಳನ್ನು ಹೊಂದಿದೆ. ಇಲ್ಲಿಯವರೆಗೆ ನಮ್ಮ ಮಹಾವಿದ್ಯಾಲಯದಿಂದ 1600 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಿದ್ದಾರೆ. ಇದರಲ್ಲಿ 56 ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡಿ ದೇಶದ ಏಳ್ಗೆಗೆ ಶ್ರಮಿಸುತ್ತಿದ್ದಾರೆ. ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾರ್ಮಿಕ ಧುರೀಣ ಅಂಬಿರಾವ್ ಅಣ್ಣಾ ಪಾಟೀಲ ವಹಿಸಿದ್ದರು. ಹುಬ್ಬಳ್ಳಿ-ಧಾರವಾಡ ಸಹಾಯಕ ಆಯುಕ್ತರಾದ ಶಂಕರ ಪಾಟೀಲ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಕಾಲೇಜಿನ ಗಣಿತ ಉಪನ್ಯಾಸಕ ಮಂಜುನಾಥ ಹಳಿಯಾಳ ಕಾಲೇಜಿನ ದಶಕದ ಸಾಧನೆಗಳನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಆದರ್ಶ ವಿದ್ಯಾರ್ಥಿಗಳಾದ ರೇಖಾ ಲಮಾಣಿ ಹಾಗೂ ಈರಣ್ಣಾ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ನಂತರ ಡಾ.ಪ್ರಕಾಶ ಮಲ್ಲಿಗವಾಡ ನಿರ್ದೇಶನದಲ್ಲಿ ವಿವಿಧ ಸಾಂಸ್ಕೃತಿಕ ಕಲಾಪ್ರದರ್ಶನ ಜರುಗಿ-ತು. ಡಾ.ಆನಂದ ಚಿತ್ತರಗಿ, ಶಿವು ಸಾಹುಕಾರ, ರಶ್ಮಿ ಗೋಡಗೇರಿ, ಸಾಹಿಲ್ ಜಂಗಲೆಪ್ಪನವರ ಸೇರಿದಂತೆ ಪಾಲಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**13ನೇ 'ಭಾರತೀಯ ಛಾತ್ರಾ ಸಂಸತ್' ಉದ್ಘಾಟಿಸಿದ ಬಸವರಾಜ ಹೊರಟ್ಟಿ ಅಭಿಮತ**

# ಯುವ ಜನತೆ ರಾಜಕೀಯಕ್ಕೆ ಬರಲಿ

■ವಿಜಯಸಾಕ್ಷಿ ಸುದ್ದಿ, ಪುಣೆ

ಇಂದು ಭಾರತ ಜಗತ್ತಿನ ಶಕ್ತಿಶಾಲಿ ರಾಷ್ಟ್ರವಾಗಿದ್ದು, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಜಗತ್ತಿಗೆ ಮಾದರಿಯಾಗಿದೆ. 12ನೇ ಶತಮಾನದಲ್ಲಿಯೇ ಪ್ರಜಾಪ್ರಭುತ್ವ ಕಲ್ಪನೆಗೆ ಭದ್ರ ಬುನಾದಿ ಹಾಕಿದ ವಿಶ್ವಗುರು ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸುವ ಮೂಲಕ 'ಸರ್ವರಿಗೂ ಸಮಬಾಳು-ಸರ್ವರಿಗೂ ಸಮಪಾಲು' ತತ್ವವನ್ನು ಬೋಧಿಸಿ ಎಲ್ಲರಲ್ಲಿಯೂ ಸಮಾನತೆ, ಸಹೋದರತ್ವ ಹಾಗೂ ಜಾತಿ ರಹಿತ ಸಮಾಜವನ್ನು ನಿರ್ಮಿಸುವ ಮೂಲಕ ಪ್ರಜಾಪ್ರಭುತ್ವದ ಮಹತ್ವವನ್ನು ಜಗತ್ತಿಗೆ ಸಾರಿ ಹೇಳಿದ್ದಾರೆ ಎಂದು ವಿ.ಪ ಸಭಾಪತಿ ಬಸವರಾಜ ಹೊರಟ್ಟಿ ನುಡಿದರು.

ಮಹಾರಾಷ್ಟ್ರದ ಪುಣೆಯ



> ಇದೇ ಸಂದರ್ಭದಲ್ಲಿ 'ಯುವ ಶಾಸಕ' ಪುರಸ್ಕಾರಕ್ಕೆ ಭಾಜನರಾದ ಯುವ ಶಾಸಕರಾದ ಸತ್ಯಜೀತ್ ಸುಧೀರ್ ತಾಂಬೆ, ಉಚ್ಚ ಶಿಕ್ಷಣ ಪಡೆದ ಪಂಚಾಯಿತಿ ಅಧ್ಯಕ್ಷರಾದ ಮಹಾರಾಷ್ಟ್ರದ ಯಶೋಧರಾ ರಾಜೆ ಶಿಂಧೆ, ಪಂಜಾಬ್‌ನ ರಾಜ್ ಬಲವಿಂದರ್ ಸಿಂಗ್, ಪ್ರಿಯಾಂಕಾ ತಿವಾರಿ ಸೇರೀದಂತೆ ಹಲವರನ್ನು ಸನ್ಮಾನಿಸಲಾಯಿತು.

ಎಂಐಟಿ ವರ್ಲ್ಡ್‌ಪೀಸ್ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ 13ನೇ ಭಾರತೀಯ ವಿದ್ಯಾರ್ಥಿ ಸಂಸದ್‌ನ ಮೂರು ದಿನಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿರುವ ಸಾಮರ್ಥ್ಯವನ್ನು ಗುರುತಿಸಿ ಭಾರತೀಯ ಸಂಸತ್ತನ್ನು ಬಲಪಡಿಸಲು, ವಿದ್ಯಾರ್ಥಿಗಳಿಗೆ ಅರಿವು ಮತ್ತು ಚೈತನ್ಯ ತುಂಬಲು 2011ರಲ್ಲಿ ಪುಣೆಯಲ್ಲಿ ಹುಟ್ಟಿಕೊಂಡ ಭಾರತೀಯ ಛಾತ್ರಾ ಸಂಸತ್ ಫೌಂಡೇಶನ್‌ನ (ಇಂಡಿಯನ್ ಸ್ಟುಡೆಂಟ್ ಪಾರ್ಲಿಮೆಂಟ್) 13ನೇ ಭಾರತೀಯ ಛಾತ್ರಾ ಸಂಸತ್ ಸಮ್ಮೇಳನ ಅತ್ಯಂತ ಅರ್ಥಪೂರ್ಣವಾದದ್ದು. ಮೂರು ದಿನಗಳ ಕಾಲ ನಡೆಯುವ ಈ ಸಮ್ಮೇಳನದ ಸದುಪಯೋಗವನ್ನು ಇಂದಿನ ಯುವಜನತೆ ಪಡೆದುಕೊಳ್ಳಬೇಕು. ಸದೃಢ ದೇಶ ಕಟ್ಟುವಲ್ಲಿ ಯುವ ಶಕ್ತಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ಯುವಜನತೆ ಎಲ್ಲಾ ಕ್ಷೇತ್ರಗಳಲ್ಲಿಯೂ ದಾಪುಗಾಲು ಇಡುತ್ತಿದ್ದು, ರಾಜಕೀಯ ಕ್ಷೇತ್ರದ ಬಗ್ಗೆ ಯುವಜನತೆ ಅತಿ ಹೆಚ್ಚಿನ ಆಸಕ್ತಿ ತೋರುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ ಬಸವರಾಜ ಹೊರಟ್ಟಿ, ಹಿಂದೆಂದಿಗಿಂತಲೂ ಯುವಜನತೆ ಇಂದು ಹೆಚ್ಚಿನ ರೀತಿಯಲ್ಲಿ ರಾಜಕೀಯ ಕ್ಷೇತ್ರದಲ್ಲಿ ಕ್ರಿಯಾಶೀಲತೆಯಿಂದ ತೊಡಗಿಕೊಳ್ಳುವುದು ಅವಶ್ಯಕವಾಗಿದೆ. ಯುವಜನತೆ ದೇಶವನ್ನು ಸದೃಡ, ಸಶಕ್ತ ಹಾಗೂ ಸಮೃದ್ಧವಾಗಿಸಲು ತಮ್ಮ ದೂರದೃಷ್ಟಿ ಹಾಗೂ ಜಾಣ್ಮೆಯಿಂದ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯರಾಗಬೇಕು.ಇದು ಇಂದಿನ ತುರ್ತು ಅವಶ್ಯಕತೆಯಾಗಿದೆ. ತಮ್ಮ ಕತೃತ್ವ ಶಕ್ತಿ ಹಾಗೂ ಮೇಧಾ ಶಕ್ತಿಯಿಂದ ರಾಜಕೀಯಕ್ಕೆ ಧುಮುಕಿ ದೇಶವನ್ನು ಅಭಿವೃದ್ಧಿಯತ್ತ ಕೊಂಡ್ಯೊಯಲು ಶ್ರಮಿಸುವಂತೆ ಕರೆ ನೀಡಿದರು.

ಸಮಾರಂಭದಲ್ಲಿ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಪೃಥ್ವಿರಾಜ್ ಚೌವ್ಹಾಣ್, ಲೋಕಸಭಾ ಸದಸ್ಯರಾದ ಚಿರಾಗ್ ಪಾಸ್ವಾನ್, ಬಿಜೆಪಿ ಕೇಂದ್ರ ವಕ್ತಾರ ಶೆಹೆಜಾದ್ ಪೂನಾವಾಲ್, ಎಂಐಟಿ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ವಿಶ್ವನಾಥ ಕರಾಡ್, ರಾಹುಲ್ ಕರಾಡ್ ಮುಂತಾದವರು ಉಪಸ್ಥಿತರಿದ್ದರು.

# ಸಂಭ್ರಮದಿಂದ ಚರಗ ಚೆಲ್ಲಿದ ರೈತರು



■ ವಿಜಯಸಾಕ್ಷಿ ಸುದ್ದಿ, ಗದಗ

ರೋಣ ತಾಲೂಕಿನ ಮುಗಳಿ ಗ್ರಾಮದ ರೈತರಾದ ರಾಮಣ್ಣ ರಂಗಪ್ಪ ಕಾಶಪ್ಪನವರ ಇವರ ಹೊಲದಲ್ಲಿ ಎಳ್ಳ ಅಮಾವಾಸ್ಯೆಯನ್ನು ಭೂ ತಾಯಿಗೆ ಚರಗ ಚೆಲ್ಲುವ ಮೂಲಕ ಆಚರಿಸಲಾಯಿತು.

ಎಳ್ಳು ಅಮಾವಾಸ್ಯೆಯ ಸಮಯದಲ್ಲಿ ಹಿಂಗಾರು ಪೈರುಗಳು ಬೆಳೆದಿರುತ್ತವೆ. ಜೋಳದ ಮಧ್ಯೆ ಕಡಲೆ ಬೆಳೆಗೆ ಕಾಯಿಕೊರಕ ಹುಳು ಬಿದ್ದು ಬೆಳೆಯ ನಾಶಕ್ಕೆ ಕಾರಣವಾಗುತ್ತದೆ. ಎಳ್ಳ ಅಮಾವಾಸ್ಯೆಯ ಈ ಸಂದರ್ಭದಲ್ಲಿ ನಾನಾ ಬಗೆಯ ಖಾದ್ಯಗಳನ್ನು ಚರಗ ಚೆಲ್ಲಿದಾಗ ಅವುಗಳನ್ನು ತಿನ್ನುವ ಸಲುವಾಗಿ ಹಕ್ಕಿಗಳು ಹೊಲಕ್ಕೆ ಬಂದು, ಕೀಟಬಾಧೆಯನ್ನು ನಿಯಂತ್ರಿಸುತ್ತವೆ. ಈ ಕಾರಣಕ್ಕಾಗಿಯೇ ಚರಗ ಚೆಲ್ಲುವ ಹಬ್ಬವನ್ನು ಆಚರಿಸಲಾಗುತ್ತದೆ ಎಂದು ಸೇರಿದ್ದ ರೈತ ಕುಟುಂಬದವರು ಅಭಿಪ್ರಾಯ ತಿಳಿಸಿದರು.

ಹಿಂಗಾರು ಪೈರುಗಳ ನಡುವೆ ಬನ್ನಿ ಮರವನ್ನು ಹುಡುಕಿ ಅದಕ್ಕೆ ಪೂಜೆ ಮಾಡಿ ಭೂಮಿತಾಯಿಗೆ ಚರಗ ಚೆಲ್ಲುವುದು ಈ ಹಬ್ಬದ ವಿಶೇಷವಾಗಿದೆ. ವರ್ಷಾನುಗಟ್ಟಲೇ ಸಮಸ್ಯೆಗಳ ಸರಮಾಲೆಯಲ್ಲಿ ಬಳಲಿದ ರೈತರು ಈ ಹಬ್ಬದ ಸಮಯದಲ್ಲಿ ಅದನ್ನೆಲ್ಲಾ ಮರೆತು ಸಂತಸದ ಕ್ಷಣಗಳನ್ನು ಅನುಭವಿಸಿದರು. ರೈತರನ್ನು ಸದಾ ಕಾಪಾಡುವ ಭೂ ತಾಯಿಗೆ ನಮಿಸಿ ಪುನೀತರಾದರು.

## ಕ್ರೀಡಾಪಟುಗಳನ್ನು ಶ್ಲಾಘಿಸಿದ ಚೈತನ್ಯ ಕ್ರೀಡಾ ಸಂಸ್ಥೆಯ ಅಧ್ಯಕ್ಷರು

# ರಾಜ್ಯ ಮಟ್ಟದ ಅಟ್ಯಾಪಟ್ಯಾದಲ್ಲಿ ಅಮೋಘ ಸಾಧನೆ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಇತ್ತೀಚೆಗೆ ಧಾರವಾಡದ ಕಲಘಟಗಿ ತಾಲೂಕಿನ ಗಳಗಿ-ಹುಲಿಕೊಪ್ಪ ಗ್ರಾಮದಲ್ಲಿ ಜರುಗಿದ ರಾಜ್ಯಮಟ್ಟದ ಅಟ್ಯಾಪಟ್ಯಾ ಚಾಂಪಿಯನ್‌ಶಿಪ್‌ನಲ್ಲಿ ಸ್ಥಳೀಯ ಚೈತನ್ಯ ಕ್ರೀಡಾ ಸಂಸ್ಥೆಯ ಕ್ರೀಡಾಪಟುಗಳು ಅತ್ಯುತ್ತಮ ಪ್ರದರ್ಶನ ತೋರುವ ಮೂಲಕ ಬಾಲಕಿಯರ ಜೂನಿಯರ್ ವಿಭಾಗದಲ್ಲಿ ಪ್ರಥಮ ಸ್ಥಾನ, ಸೀನಿಯರ್ ಮಹಿಳಾ ವಿಭಾಗದಲ್ಲಿ ದ್ವಿತೀಯ ಹಾಗೂ ಬಾಲಕಿಯರ್ ಸಬ್ ಜೂನಿಯರ್ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆಯುವ ಮೂಲಕ ಚೈತನ್ಯ ಕ್ರೀಡಾ ಸಂಸ್ಥೆಗೆ ಹಾಗೂ ಗದಗ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಈ ಕ್ರೀಡಾಪಟುಗಳು ಕಳೆದ ಒಂದು ವರ್ಷದಿಂದ ಚೈತನ್ಯ ಕ್ರೀಡಾ ಸಂಸ್ಥೆಯ ಅಡಿಯಲ್ಲಿ ತರಬೇತಿ ಪಡೆಯುತ್ತಿದ್ದು, ಕ್ರೀಡಾಪಟುಗಳ ಕ್ರೀಡಾ ಸಾಧನೆಗೆ ಸಂಸ್ಥೆಯ ಮಹಮ್ಮದ ರಫೀಕ ರೇವಡಿಗಾರ ತರಬೇತಿ ನೀಡಿದರೆ, ಕ್ರೀಡಾ ಸಂಪನ್ಮೂಲ ವ್ಯಕ್ತಿಗಳಾದ ವಿ.ಎ. ಕುಂಬಾರ ಹಾಗೂ ದೈಹಿಕ ಶಿಕ್ಷಕ ಆರ್.ಎಸ್. ನರೇಗಲ್ಲ ಮಾರ್ಗದರ್ಶನ ಮಾಡುತ್ತಿದ್ದರು.

ಬಾಲಕಿಯರ ಜೂನಿಯರ್ ವಿಭಾಗದ ಅಂತಿಮ ಪಂದ್ಯದಲ್ಲಿ ಗಳಗಿ-ಹುಲಿಕೊಪ್ಪ ತಂಡದ ವಿರುದ್ಧ ಅತಿ ಹೆಚ್ಚು ಅಂಕಗಳಿಂದ ಜಯಶಾಲಿಯಾಗುವ ಮೂಲಕ ಪ್ರಥಮ ಸ್ಥಾನ ಪಡೆದುಕೊಂಡರೆ, ಬಾಲಕಿಯರ ಸಬ್ ಜೂನಿಯರ್ ತಂಡ ನರಗುಂದ ತಾಲೂಕಿನ ವಾಸನ ತಂಡದ ವಿರುದ್ಧ ಅತ್ಯುತ್ತಮ ಪ್ರದರ್ಶನ ತೋರಿದರೂ ಕೊನೆಯ ಕ್ಷಣದಲ್ಲಿ ಎರಡು ಅಂಕಗಳಿಂದ ಸೋಲನುಭವಿಸಿ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟಿತು. ಮಹಿಳಾ ಸೀನಿಯರ್ ವಿಭಾಗದಲ್ಲಿ ಚೈತನ್ಯ ಕ್ರೀಡಾ ಸಂಸ್ಥೆಯ ತಂಡ ಹುಬ್ಬಳ್ಳಿ ವಿಶ್ವಭಾರತಿ ತಂಡದ ವಿರುದ್ಧ ಅತ್ಯುತ್ತಮ ಪ್ರದರ್ಶನ ತೋರಿದರೂ ಕೊನೆಯ ಕ್ಷಣದಲ್ಲಿ ಪರಾಭವಗೊಂಡು ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳುವಂತಾಯಿತು.

**36 ಕ್ರೀಡಾಪಟುಗಳು ಭಾಗಿ:** ಮೂರು ವಿಭಾಗಗಳಲ್ಲಿ ಒಟ್ಟು 36 ಕ್ರೀಡಾಪಟುಗಳು ಭಾಗವಹಿಸಿದ್ದು, ಇವರಲ್ಲಿ ಸ್ಥಳೀಯ ಅನ್ನದಾನೇಶ್ವರ ಪ.ಪೂ ಮಹಾವಿದ್ಯಾಲಯದ 4 ಕ್ರೀಡಾಪಟುಗಳು, ಶ್ರೀ ಕೃಷ್ಣಾಜಿ ರಂಗರಾವ ಕುಲಕರ್ಣಿ ಸರಕಾರಿ ಪ್ರೌಢಶಾಲೆಯ 13, ಸ್ಥಳೀಯ ಸರಕಾರಿ ಪ.ಪೂ ಮಹಾವಿದ್ಯಾಲಯದ 2, ಜಕ್ಕಲಿಯ ಸರಕಾರಿ ಪ್ರಾಥಮಿಕ ಶಾಲೆಯ 7, ಜಕ್ಕಲಿ ಎಸ್‌ಎಜೆಡಿ ಪ್ರೌಢಶಾಲೆಯ 3 ಕ್ರೀಡಾಪಟುಗಳು ಭಾಗಿಯಾಗುವ ಮೂಲಕ ಅಮೋಘ ಸಾಧನೆ ಮಾಡಿದ್ದಾರೆ.



ಈ ಕ್ರೀಡಾ ಪಟುಗಳ ಸಾಧನೆಗೆ ಸಮಯೋಚಿತ ಮಾಹಿತಿ ನೀಡಿದ ರಾಜ್ಯ ಅಟ್ಯಾಪಟ್ಯಾ ಸಂಸ್ಥೆಯ ಕಾರ್ಯದರ್ಶಿ ಎಲ್.ಸಿ. ಲಮಾಣಿ, ರಾಷ್ಟ್ರೀಯ ತರಬೇತುದಾರ ಕೃಷ್ಣಾ ನಡುಮನಿಯವರಿಗೆ, ಶಿಕ್ಷಕ ವಿ.ಎ. ಕುಂಬಾರ, ದೈಹಿಕ ಶಿಕ್ಷಕ ಆರ್.ಎಸ್. ನರೇಗಲ್ಲರವರಿಗೆ, ತರಬೇತುದಾರ ಮಹಮ್ಮದ ರಫೀಕ್ ರೇವಡಿಗಾರರವರಿಗೆ ಸಂಸ್ಥೆಯ ಅಧ್ಯಕ್ಷ ಎನ್.ಕೆ. ಬೇವಿನಕಟ್ಟಿ, ಕಾರ್ಯದರ್ಶಿ ಸಂತೋಷ ಯಳಮಲಿ, ಸಂಸ್ಥೆಯ ಪದಾಧಿಕಾರಿಗಳು ಹಾಗೂ ಕ್ರೀಡಾ ಪ್ರೇಮಿಗಳು ಅಭಿನಂದನೆ ಸಲ್ಲಿಸಿದ್ದಾರೆ.

# ವಿದ್ಯಾರ್ಥಿಗಳಿಗಾಗಿ ಒಂದು ದಿನದ ಕಾರ್ಯಾಗಾರ

■ ವಿಜಯಸಾಕ್ಷಿ ಸುದ್ದಿ, ಗದಗ

ಆಂಗ್ಲೋ ಉರ್ದು ಬಾಲಕ/ಬಾಲಕಿಯರ ಪ್ರೌಢಶಾಲೆ ಗದಗ, ಜಿಲ್ಲಾ ಪಂಚಾಯತ ಗದಗ, ಶಾಲಾ ಶಿಕ್ಷಣ ಇಲಾಖೆ ಗದಗ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಗದಗ ಹಾಗೂ ರೋಟರಿ ಕ್ಲಬ್ ಗದಗ, ಎನ್.ಟಿ.ಟಿ.ಎಫ್. ಗದಗ ಇವರ ಆಶ್ರಯದಲ್ಲಿ 2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಗುಣಾತ್ಮಕ ಪರೀಕ್ಷಾ ಫಲಿತಾಂಶಕ್ಕಾಗಿ ಪೂರ್ವ ತಯಾರಿ ಹಾಗೂ ಎಸ್‌ಎಸ್‌ಎಲ್‌ಸಿ ನಂತರ ಮುಂದೇನು? ವಿಷಯದ ಕುರಿತು ಒಂದು ದಿನದ ಪ್ರೇರಣಾ, ಸಂಕಲ್ಪ ಹಾಗೂ ಸಂಜೀವಿನಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.



ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಕ್ಕಳು ವಿಷಯಗಳನ್ನು ಅರ್ಥೈಸಿಕೊಂಡು ಕಲಿಯಬೇಕು, ಇಷ್ಟಪಟ್ಟು ಓದಬೇಕು ಹಾಗೂ ಎ.ಪಿ.ಜೆ ಅಬ್ದುಲ್ ಕಲಾಂರಂತೆ ತಿಳಿಯದ ವಿಷಯದ ಬಗ್ಗೆ ಗುರುಗಳಿಗೆ ಪ್ರಶ್ನೆ ಕೇಳುವಂತಾಗಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಡಾ. ಪ್ಯಾರಲಿ ನೂರಾನಿ ಮಾತನಾಡಿ, ಎಸ್‌ಎಸ್‌ಎಲ್‌ಸಿ ಹಂತವು ಜೀವನದ ಪ್ರಮುಖ ಘಟ್ಟ. ಈ ಸಂದರ್ಭದಲ್ಲಿ ಸಮಯವನ್ನು ವ್ಯರ್ಥ ಮಾಡದೆ ಅಧ್ಯಯನ ಮಾಡಬೇಕು ಎಂದರು.

ಸನ್ಮಾರ್ಗ ಪಿ.ಯು. ಕಾಲೇಜಿನ ನಿರ್ದೇಶಕ ಪುನೀತ ದೇಶಪಾಂಡೆ ಎಸ್‌ಎಸ್‌ಎಲ್‌ಸಿ ನಂತರ ಮುಂದೇನು? ಎಂಬ ವಿಷಯ ಕುರಿತು ಮಾರ್ಗದರ್ಶನ ನೀಡಿದರು. ಎನ್.ಟಿ.ಟಿ.ಎಫ್ ಗದಗ ಸಂಸ್ಥೆಯ ಪ್ರಾಚಾರ್ಯರಾದ ಸುಮಂಗಲಾ ಎನ್.ಟಿ.ಟಿ.ಎಫ್. ಕೋರ್ಸ್ ಕುರಿತು ಸುದೀರ್ಘ ಮಾಹಿತಿ ನೀಡಿದರೆ, ವೀಣಾ ತಿರ್ಲಾಪುರ ಪರೀಕ್ಷಾ ಪದ್ಧತಿ ಕುರಿತು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀಕಾಂತ ಬಡ್ಡೂರ, ಶಹನಾಜ ಬೇಗಂ ನೆಗಳೂರು, ಸಾದಿಯಾ ಬರ್ಜಿಸ್, ಪಿ.ಕೆ. ಮುಲ್ಲಾ ಮಕ್ಕಳಿಗೆ ತರಬೇತಿ ನೀಡಿದರು. ಬಿ.ಆರ್.ಪಿ ಪ್ರಕಾಶ ಮಂಗಳೂರು ನಿರೂಪಿಸಿದರು. ಶಾಮ್ ಲಾಂಡೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಲ್.ಆರ್ ಇಟಗಿ ವಂದಿಸಿದರು.

ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಎಚ್.ಎ. ಫಾರೂಕಿ, ರೋಟರಿ ಸಂಸ್ಥೆಯ ಶ್ರೀಧರ ಸುಲ್ತಾನಪೂರ, ಶಿವಾಚಾರ್ಯ ಹೊಸಳ್ಳಿಮಠ,. ಎನ್.ಎ. ನವಲಗುಂದ, ಖಲೀಲಅಹ್ಮದ ಎ ಜಲಗೇರಿ, ಪ್ರೌಢಶಾಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.


# ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ

■ ವಿಜಯಸಾಕ್ಷಿ ಸುದ್ದಿ, ಗದಗ

ವಿಜಯಸಾಕ್ಷಿ ಸುದ್ದಿ, ಗದಗ

ಗುರುಬಸವ ಜನಕಲ್ಯಾಣ ಸಂಸ್ಥೆಯ ಶ್ರೀ ಹಂಪಸಾಗರ ಪರ್ವತ ಮರಿದೇವರ ಸ್ಮಾರಕ ಯೋಗ ವ್ಯಾಯಾಮ ಹಾಗೂ ಕ್ರೀಡಾ ಸಂಘ-ಶಿರೋಳ, ನರಗುಂದ ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ (ನಮ್ಮೂರ ರೊಟ್ಟಿ ಜಾತ್ರೆ)ದ ಅಂಗವಾಗಿ ಯೋಗಾಸನ ಪ್ರವೀಣ ದಿ ರುದ್ರಪ್ಪ ಜಿ.ಕೊಣ್ಣೂರ ಸ್ಮರಣಾರ್ಥ ಜ.31ರಂದು ರಾಜ್ಯಮಟ್ಟದ ಮುಕ್ತ ಯೋಗಾಸನ ಸ್ಪರ್ಧೆಗಳನ್ನು ಆಯೋಜಿಸಿದ್ದಾರೆ.

ಸ್ಪರ್ಧೆಗಳಲ್ಲಿ ಕರ್ನಾಟಕ ರಾಜ್ಯದ ಯೋಗಾಸನ ಕ್ರೀಡಾಪಟುಗಳು ಭಾಗವಹಿಸಲು ಅವಕಾಶವಿದೆ. ಸ್ಪರ್ಧೆಗಳು ವಯೋಮಿತಿ ಆಧಾರ ಮೇರೆಗೆ (8-14, 15-17, 18-25 ಮತ್ತು 25 ವರ್ಷ ಮೇಲ್ಪಟ್ಟು) ಸ್ತ್ರೀ-ಪುರುಷರಿಗಾಗಿ ಪ್ರತ್ಯೇಕವಾಗಿ ನಡೆಯುವವು. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಸ್ಪರ್ಧೆಗಾಗಿ ನಿಗದಿಪಡಿಸಿದ ವೀರಭದ್ರಾಸನ, ಬದ್ಧಪದ್ಮಾಸನ, ಪಶ್ಚಿಮೋತ್ತಾನಾಸನ, ಅರ್ಧ ಮತ್ಸ್ಯೇಂದ್ರಾಸನ, ಉಷ್ಟ್ರಾಸನ, ಸರ್ವಾಂಗಾಸನ, ಮತ್ಸ್ಯಾಸನ, ಚಕ್ರಾಸನ ಈ ಎಂಟು ಆಸನಗಳಲ್ಲಿ 3 ಆಸನಗಳನ್ನು ಪ್ರದರ್ಶಿಸಬೇಕು.



ಸ್ಪರ್ಧೆಯಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ನಗದು ಬಹುಮಾನ, (ಪ್ರಥಮ ರೂ. 3 ಸಾವಿರ, ದ್ವಿತೀಯ ರೂ. 2 ಸಾವಿರ, ತೃತೀಯ ರೂ. 1 ಸಾವಿರ) ಪದಕ, ಪ್ರಶಸ್ತಿ ಪತ್ರ ಹಾಗೂ ಕ್ರಮವಾಗಿ 4, 5, 6ನೇ ಸ್ಥಾನ ಗಳಿಸಿದವರಿಗೆ ಪ್ರಶಸ್ತಿಪತ್ರ ಮತ್ತು ಭಾಗವಹಿಸಿದವರೆಲ್ಲರಿಗೂ ಪ್ರಾತಿನಿಧ್ಯ ಪತ್ರ ನೀಡಲಾಗುವುದು.

ಸ್ಪರ್ಧೆ ಗಳಲ್ಲಿ ಭಾಗವಹಿಸುವವರಿಗೆ ಸ್ಪರ್ಧಾ ದಿನದಂದು ಉಪಹಾರ, ಊಟದ ವ್ಯವಸ್ಥೆ ಮತ್ತು ದೂರದ ಊರಿಂದ ಬರುವ ಸ್ಪರ್ಧಿಗಳಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು. ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರವೇಶ ಉಚಿತವಾಗಿದೆ. ಆಸಕ್ತ ಯೋಗಾಸನ ಕ್ರೀಡಾ ಪಟಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಸಂಘಟಕರ ಪರವಾಗಿ ಗದಗ ಜಿಲ್ಲಾ ಅಮೆಚೂರ್ ಯೋಗಾಸನ ಕ್ರೀಡಾ ಸಂಸ್ಥೆಯ ಅಧ್ಯಕ್ಷ ಕೆ.ಎಸ್. ಪಲ್ಲೇದ, ಕಾರ್ಯದರ್ಶಿ ಚೇತನ ಚುಂಚಾ ವಿನಂತಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ-7760591242, 9448317188, 9743200144 ಸಂಪರ್ಕಿಸಬಹುದಾಗಿದೆ.

# ಕೇವಲ ಅಂಕ ಗಳಿಕೆ ಮಗುವನ್ನು ವಿಕಾಸಗೊಳಿಸದು




■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಕೇವಲ ಪುಸ್ತಕದಲ್ಲಿನ ಹುಳುಗಳನ್ನು ಮಾಡಿ ಅಕ್ಷರ ಕಲಿಸಿದರೆ ಸಾಲದು, ವಿದ್ಯಾರ್ಥಿಗಳಲ್ಲಿ ಸಂಸ್ಕೃತಿ, ಸಂಸ್ಕಾರ ಬೆಳೆಸಿದಾಗ ಮಾತ್ರ ಉತ್ತಮ ವ್ಯಕ್ತಿತ್ವ ರೂಪುಗೊಂಡು ಸಮಾಜಮುಖಿಯಾಗಿ ಬದುಕಲು ಸಾಧ್ಯ. ಕೇವಲ ಅಂಕ ಗಳಿಕೆ ಮಗುವನ್ನು ವಿಕಾಸಗೊಳಿಸದು. ಓದಿನ ಜೊತೆಗೆ ಕ್ರೀಡೆ ಮತ್ತು ಲಲಿತ ಕಲೆಗಳ ಆಸಕ್ತಿ ಮತ್ತು ಪಾಲ್ಗೊಳ್ಳುವಿಕೆ ಬೇಕು ಎಂದು ತಹಸೀಲ್ದಾರ ವಿಠ್ಠಲ ಚೌಗಲಾ ಅಭಿಪ್ರಾಯಪಟ್ಟರು.

ಅವರು ಸಮೀಪದ ಭಾಗ್ಯನಗರದ ಶ್ರೀ ಶಾರದಾಂಬಾ ಪಬ್ಲಿಕ್ ಶಾಲೆಯ 9ನೇ ಶಾಲಾ ವಾರ್ಷಿಕೋತ್ಸವ, ಸಾಧಕರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಹಿರಿಯ ವಕೀಲ ರಾಘವೇಂದ್ರ ಪಾನಘಂಟಿ ಮಾತನಾಡಿದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎ.ಎಮ್. ಮದರಿ ಹಾಗೂ ಖ್ಯಾತ ವಾಣಿಜ್ಯೋದ್ಯಮಿ ಕೆ.ಎಸ್. ಗುಪ್ತಾರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸದ್ಗುರು ಶ್ರೀ ಶಿವರಾಮ ಅವಧೂತ ಆಶ್ರಮ ಹೊಸಪೇಟೆಯ ಪೂಜ್ಯ ಶ್ರೀ ಸ್ವಾಮಿ ಶಿವಪ್ರಕಾಶಾನಂದ ಪರಮಹಂಸರು, ಶ್ರೀ ರುದ್ರಾವಧೂತ ಮಠ ಜಮಖಂಡಿಯ ಪೂಜ್ಯ ಶ್ರೀ ಸ್ವಾಮಿ ಕೃಷ್ಣಾನಂದ ಅವಧೂತರು, ಶ್ರೀ ಶಿವಾನಂದ ಮಠ ಮಠಮಾರಿ ರಾಯಚೂರಿನ ಪೂಜ್ಯ ಶ್ರೀ ಸ್ವಾಮಿ ಜ್ಞಾನಾನಂದ ಮಹಾರಾಜರು, ಜಗದ್ಗುರು ಶ್ರೀ ಶಂಕರಾಚಾರ್ಯ ಮಠ ಭಾಗ್ಯನಗರದ ಪೂಜ್ಯ ಶ್ರೀ ಶಿವರಾಮಕೃಷ್ಣಾನಂದ ಭಾರತಿ ಸ್ವಾಮಿಗಳು, ಜಗದ್ಗುರು ಶ್ರೀ ಶಂಕರಾಚಾರ್ಯ ಮಠ ಕಲ್ಲೂರಿನ ಪೂಜ್ಯ ಶ್ರೀ ಶಿವರಾಮಾನಂದ ಭಾರತಿ ಸ್ವಾಮಿಗಳು, ಭಾಗ್ಯನಗರ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸುರೇಶ ಬಬಲಾದಿ, ಸಂಸ್ಥೆಯ ಸುಭಾಷ ಅಂಟಾಳಮರದ, ನಾಗುಸಾ ಮೇಘರಾಜ, ಮೋಹನಸಾ ಮೇಘರಜ, ಗ್ಯಾನೇಶ ಹ್ಯಾಟಿ, ರಮನಾಥಸಾ ಕಬಾಡೆ, ಕೃಷ್ಣ ಪಾನಘಂಟಿ, ಪ್ರಾಂಶುಪಾಲರಾದ ವನಿತಾ ಕೋರಿ, ಮುಖ್ಯೋಪಾಧ್ಯಾಯೆ ಲತಾ ಜೀರಾಳ ಸೇರಿ ಅನೇಕರಿದ್ದರು.

ರಾಜಶ್ರೀ ಸ್ವಾಗತಿಸಿದರು. ಸಂಸ್ಥೆಯ ನಿರ್ದೇಶಕ ರಮೇಶ ಹ್ಯಾಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಲತಾ ಜೀರಾಳ ವಾರ್ಷಿಕ ವರದಿ ವಾಚಿಸಿದರು. ಅಮೃತ ಕುಮಾರ ವಂದಿಸಿದರು.

# ಶೈಕ್ಷಣಿಕ ಪ್ರವಾಸ ಜ್ಞಾನಾರ್ಜನೆಗೆ ಸಹಕಾರಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೇಶ ಸುತ್ತು ಕೋಶ ಓದು ಎಂಬ ಮಾತಿನಂತೆ ಶೈಕ್ಷಣಿಕ ಪ್ರವಾಸಗಳು ವಿದ್ಯಾರ್ಥಿ ಜೀವನದ ಪ್ರಮುಖ ಜ್ಞಾನದ ಆಕರಗಳಾಗಿವೆ. ಅಧ್ಯಯನದೊಂದಿಗೆ ಸ್ಥಳ ಭೇಟಿಯು ವಿದ್ಯಾರ್ಥಿಗಳಿಗೆ ಜ್ಞಾನದ ಸ್ಪಷ್ಟತೆಗೆ ದಾರಿ ಮಾಡಿ ಕೊಡುತ್ತವೆ ಎಂದು ತಹಸೀಲ್ದಾರ ವಾಸುದೇವಸ್ವಾಮಿ ಅಭಿಪ್ರಾಯಪಟ್ಟರು.

ಅವರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಶಿರಹಟ್ಟಿ ವತಿಯಿಂದ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ 'ಕರ್ನಾಟಕ ದರ್ಶನ' ಉಚಿತ ಶೈಕ್ಷಣಿಕ ಪ್ರವಾಸಕ್ಕೆ ಚಾಲನೆ ನೀಡಿ ಮಾತನಾಡಿ, ಸರಕಾರದ ಈ ಯೋಜನೆಯಿಂದ ಅರ್ಹ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಅನುಕೂಲವಾಗಿದೆ ಎಂದರು.




ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ. ಮುಂದಿನಮನಿ ಮಾತನಾಡಿ, ಉಚಿತ ಪ್ರವಾಸ ಯೋಜನೆಯಿಂದ ಕಡು ಬಡತನದ ಹಿನ್ನೆಲೆಯ ವಿದ್ಯಾರ್ಥಿಗಳು ಸಹ ಪ್ರವಾಸದ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ. ಸರಕಾರದ ಈ ಯೋಜನೆಯಿಂದ ಬಹಳಷ್ಟು ಮಕ್ಕಳಿಗೆ ಅವರ ಜ್ಞಾನದ ವಿಸ್ತಾರಕ್ಕೆ ಸಹಕಾರಿಯಾಗಿದೆ ಎಂದು ಹೇಳಿದರು.

ಸಿ.ಪಿ.ಐ ನಾಗರಾಜ ಮಾಡಳ್ಳಿ ಮಾತನಾಡಿ, ಪ್ರವಾಸದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸುರಕ್ಷತೆಯ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಗೈಡ್ ಶಿಕ್ಷಕರ ಮಾರ್ಗದರ್ಶನದನವನ್ನು ಪಾಲಿಸಬೇಕು ಎಂದು ಸಲಹೆ ನೀಡಿದರು.

ಪುರಸಭೆ ಸದಸ್ಯರಾದ ಪ್ರವೀಣ ಬಾಳಿಕಾಯಿ, ಬಸವರಾಜ ಓದುನವರ, ದೈಹಿಕ ಶಿಕ್ಷಣ ಪರಿವೀಕ್ಷಕ ಎಮ್.ಎಮ್. ಹವಳದ, ಶಿಕ್ಷಣ ಸಂಯೋಜಕ ಹರೀಶ್.ಎಸ್, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಆನಂದ ಮುಳಗುಂದ, ಶಿಕ್ಷಕರಾದ ಎಚ್.ಎಂ. ಗುತ್ತಲ, ಎಸ್.ಡಿ. ಲಮಾಣಿ, ಎಲ್.ಎನ್. ನಂದೆಣ್ಣವರ, ಡಿ.ಡಿ. ಲಮಾಣಿ, ಗೀತಾ ಹಳ್ಯಾಳ, ಶಿವಣ್ಣ ಇಟಗಿ, ಬಸವರಾಜ ಕುರಿ, ಬಸವರಾಜ ಮುದಗಲ್, ಎಚ್.ಬಿ. ಸಣ್ಣಮನಿ, ಡಿ.ಸಿ. ನರೇಗಲ್, ಎನ್.ಸಿ.ಕೆ. ಪಾಟೀಲ, ಎಂ.ಡಿ. ತಳ್ಳಳ್ಳಿ, ಡಿ.ಸಿ. ಪತ್ತಾರ, ಎಚ್.ಡಿ. ನಿಂಗರೆಡ್ಡಿ, ಸಿಆರ್‌ಪಿ ಸತೀಶ ಬೋಮಲೆ, ಉಮೇಶ ನೇಕಾರ, ಎನ್.ಎ. ಮುಲ್ಲಾ, ಗಿರೀಶ ನೇಕಾರ, ಬಿಆರ್‌ಪಿ ಈಶ್ವರ ಮೆಡ್ಲೇರಿ ಇದ್ದರು.

# ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಜನವರಿ 12 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 15,16,17 ಶಹಾಪುರ ಪೇಟೆ, ಡಿಸಿ ಮಿಲ್ ರೋಡ್, ಜವಳಗಲ್ಲಿ, ಭಜಂತ್ರಿ ಓಣಿ, ಮೀನದ ಮಾರ್ಕೆಟ್ ರೋಡ್, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್ ಲೈನ್, ಶರಣ ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್ ಉಳಿದ ಭಾಗಗಳು.

ವಾರ್ಡ್ ನಂ 30, 34, 35 ಆದರ್ಶ ನಗರ 3ನೇ ಕ್ರಾಸ್,

2ನೇ ಕ್ರಾಸ್, 1 ನೇ ಕ್ರಾಸ್, ಹುಡ್ಕೋ 1ನೇ ಕ್ರಾಸ್ ಉಳಿದ ಭಾಗಗಳು. ವಾರ್ಡ್ ನಂ 24, 26 ಅಬ್ಬಿಗೇರಿ ಕಾಂಪೌಂಡ್, ಕಮ್ಮಾರ ಸಾಲ, ಸಾಲಮನೆ, ಹಳೆ ಡಿಸಿ ಆಫೀಸ್ ಲೈನ್, 76 ಪ್ಲಾಟ್, ತೆಗ್ಗಿನ ಪ್ಲಾಟ್, ಉಡಚಮ್ಮನ ಗುಡಿ, ಮಕಾನಗಲ್ಲಿ ಉಳಿದ ಭಾಗಗಳು.

ವಾರ್ಡ್ ನಂ. 27, 28 ಸ್ಟೇಡಿಯಂ ಸಜ್ಜನರ ಲೈನ್, ನಾಗರಕಟ್ಟಿ ಲೈನ್, ತುಪ್ಪದರ ಲೈನ್, ಮಠದ ಲೈನ್, ಮಲ್ಲಾಡದರ ಲೈನ್, ಕೆ ಹೆಚ್ ಪಾಟೀಲರ ಲೈನ್, ನಂದೀಶ್ವರ ಮಠದ ಹಿಂದಿನ ಭಾಗ, ರೊಟ್ಟಿ ಲೇಔಟ್, ಹೊಸಮನಿಯವರ ಲೈನ್.

ವಾರ್ಡ್ ನಂ.2 ಗಾಂಧಿ ನಗರ ಹರಣಶಿಕಾರಿ ಓಣಿ, ಸೆಟ್ಲಮೆಂಟ್ ಹನುಮಂತ ದೇವರ ಗುಡಿ ಲೈನ್, ಸ್ಲಾಬ್ ಮನೆ ವೆಲ್ಫೇರ್.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ. ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಆಹ್ವಾನಿಸಿದ್ದು, ಎಲ್ಲಾ ತಾಲೂಕುಗಳ ವ್ಯಾಪ್ತಿಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ https://twd.karnataka.gov.in/ https://ssp.postmatric.karntaka.gov.in ವೆಬ್‌ಸೈಟ್‌ನಲ್ಲಿ ಅರ್ಜಿ ಹಾಕಲು ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ ಗದಗ ದೂರವಾಣಿ ಸಂಖ್ಯೆ: 08372-297258/9480843128, ಸಹಾಯಕ ನಿರ್ದೇಶಕರ ಕಚೇರಿ ಮುಂಡರಗಿ ದೂರವಾಣಿ ಸಂಖ್ಯೆ: 08371-262449/9480843129, ಸಹಾಯಕ ನಿರ್ದೇಶಕರ ಶಿರಹಟ್ಟಿ ಕಚೇರಿ ದೂರವಾಣಿ ಸಂಖ್ಯೆ: 08487-242312/9480843132 ಸಹಾಯಕ ನಿರ್ದೇಶಕರ ರೋಣ ಕಚೇರಿ ದೂರವಾಣಿ ಸಂಖ್ಯೆ: 08381-267120/9480843131 ಸಹಾಯಕ ನಿರ್ದೇಶಕರ ನರಗುಂದ ಕಚೇರಿ ದೂರವಾಣಿ ಸಂಖ್ಯೆ: 08377-245731/ 9480843130 ಗಳಿಗೆ ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಪುರಸಭೆ ಕಾರ್ಯಾಲಯ, ನರಗುಂದ ಜಿ. ಗದಗ, ಕರ್ನಾಟಕ-582207**

**ದೂರವಾಣಿ/ಫ್ಯಾಕ್ಸ್ : 08377-244227 / 244226 Email : itstaff_ulb_naragund@yahoo.co.in**

ಕ್ರಸಂ:ಪುಸನ/15ನೇ ಹಣಕಾಸು/ಟೆಂಡರ/2023-24. ದಿನಾಂಕ : 11-01-2024

**ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರಮೆಂಟ್ ಮೂಲಕ)**

ನರಗುಂದ ಪುರಸಭೆಯ ವಿವಿಧ ಯೋಜನೆಯ ಅನುದಾನಗಳಡಿ ಈ ಕೆಳಕಂಡ ಕಾಮಗಾರಿ ನಿರ್ವಹಣೆಗಾಗಿ "ಇ-ಪ್ರೊಕ್ಯೂರ್‌ಮೆಂಟ್" ಪದ್ಧತಿಯಲ್ಲಿ ನಿಗದಿತ ದಸ್ತಾವೇಜ್‌ಗಳಲ್ಲಿ ಗುತ್ತಿಗೆದಾರರ/ಫರ್ಮದಾರರ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ದಿನಾಂಕ : **23-01-2024** ರ ಸಂಜೆ 5:30 ಗಂಟೆಯ ಒಳಗಾಗಿ ಇಪ್ರೊಕ್ಯೂರಮೆಂಟ್ ಮೂಲಕವೇ ಟೆಂಡರ ಸಲ್ಲಿಸುವುದು. ಇ-ಪ್ರೊಕ್ಯೂರಮೆಂಟ್ ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in/** ಹಾಗೂ **www.naragundatown.mrc.gov.in** ಸಂಪರ್ಕಿಸುವುದು. ಹಾಗೂ ಟೆಂಡರ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ. ಈ ಟೆಂಡರ್‌ಗಳಿಗೆ ಸಂಬಂಧಿಸಿದ ಯಾವುದೇ ತಿದ್ದುಪಡಿಗಳನ್ನು ಇಪ್ರೊಕ್ಯೂರಮೆಂಟ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಣೆ ಮಾಡಲಾಗುವುದು ಯಾವುದೇ ಪೇಪರ್ ಪ್ರಕಟಣೆ ಹೊರಡಿಸಲಾಗುವುದಿಲ್ಲ.

| ಕ್ರ.ಸಂ | ಇಂಡೆಂಟ್ ನಂ. | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಮೀಸಲಾತಿ |
|---|---|---|---|
| 1 | DMA/2023-24/BD/WORK_INDENT11735 | 1.50 | SC |
| 2 | DMA/2023-24/RD/WORK_INDENT11753 | 2.36 | ST |
| 3 | DMA/2023-24/OW/WORK_INDENT11738 | 2.50 | Others |
| 4 | DMA/2023-24/OW/WORK_INDENT11751 | 2.60 | Others |
| 5 | DMA/2023-24/OW/WORK_INDENT11743 | 8.00 | Others |
| 6 | DMA/2023-24/WT/WORK_INDENT12109 | 8.00 | Others |
| 7 | DMA/2023-24/RD/WORK_INDENT11744 | 11.00 | Others |
| 8 | DMA/2023-24/RD/WORK_INDENT11741 | 14.00 | Others |
| 9 | DMA/2023-24/RD/WORK_INDENT11742 | 16.00 | Others |
| 10 | DMA/2023-24/OW/WORK_INDENT11730 | 18.50 | Others |
| 11 | DMA/2023-24/OW/WORK_INDENT11728 | 24.00 | SC |

ಸಹಿ/- ಮುಖ್ಯಾಧಿಕಾರಿ, ಪುರಸಭೆ, ನರಗುಂದ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/450/2023-24

ಸಹಿ/- ಆಡಳಿತಾಧಿಕಾರಿಗಳು, ಪುರಸಭೆ, ನರಗುಂದ


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka